ಅಪರಂಜಿ

ಜುಲೈ 2004

ತಿಳಿನಗೆಯ ಕಾರಂಜಿ



ಪ್ರಕಾಶ್

ಎಲ್.ಎಸ್. ಶೇಷಗಿರಿ ರಾವ್

ಪಂಜೆ ಮಂಗೇಶರಾಯರು

ಕೆ.ವಿ. ಐಯ್ಯರ್

ಬಿ.ಹೆಚ್. ಕುಲಕರ್ಣಿ

ಸುಕೇಶವ

ಪರಮೇಶ್ವರ ಪುರಾಣಿಕ

ಪ್ರಕಾಶ್

ಮಣಿ

ನೀರಗುಂದ ಕೇಶವಮೂರ್ತಿರಾವ್

ರಾಮಿ

ಎಚ್. ಗೋಪಾಲಕೃಷ್ಣ

ಬಿಡಿ ಪ್ರತಿ: ರೂ. 10.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:

ಬಿಡಿ ಪ್ರತಿ:	ರೂ. 10.00
ವಾರ್ಷಿಕ ಚಂದಾ	ರೂ. 100
ಹತ್ತು ವರ್ಷದ ಚಂದಾ	ರೂ. 750

Ph: 23345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ಜುಲೈ - 2004 ಸಂಚಿಕೆ - 10

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



ಂ ಪ್ರಕಾಶ್

ಸಿ.ಇ.ಟಿ. - ಸಂಪುಟ ರಚನೆವರೆಗೆ ಸೀಟು ಹಂಚಿಕೆ ಬೇಡ

- ಪತ್ರಿಕೆ

ಗಣೇಶನ ಮದುವೆ??

★★★

ಕೋಣೆಯಲ್ಲಿ ಕುಳ್ಳಿರಿಸಿ ಬೋಧಿಸುವುದು ಗುಣಮಟ್ಟದ ಶಿಕ್ಷಣವಲ್ಲ

- NAAC ನಿರ್ದೇಶಕ

ಇದು ನಮಗೆ ವಿದ್ಯಾರ್ಥಿ ದೆಶೆಯಿಂದಲೂ ಗೊತ್ತಿತ್ತು!

★★★

ಹೈಕೋರ್ಟ್ ಆದೇಶ ನೀಡಿದರೂ ಬರದ ವೇತನ

- ಸುದ್ದಿ

ಆದೇಶಕ್ಕೂ 'ನಿಕೇತನ?'!

★★★

ಒಲಂಪಿಕ್ 'ಚಿನ್ನ'ದ ಕನಸಿನಲ್ಲಿ 'ಧನ'ರಾಜ್!!

★★★

ಅಲ್-ಯವರ್ ಇರಾಕಿನ ಹೊಸ ಅಧ್ಯಕ್ಷ

- ಸುದ್ದಿ

ಬುಷ್‌ಗೆ ಅವರು ಆಲ್-ಯುವರ್ಸ್ ಅಂದರು ಎಂಬುದು ಶುದ್ಧ ಕುಹಕ!!

★★★

ಚೇತರಿಸಿಕೊಂಡಿರುವ ಹರಭಜನ್ ಸಿಂಗ್

- ಕ್ರೀಡಾ ಸುದ್ದಿ

ದಾಲ್ಮಿಯಾಗೆ ಭಜನೆ ಸಲ್ಲಿಸಬೇಕು!!

★★★

ಪಾಕಿಸ್ತಾನದಿಂದ ಘೋರಿ ಕ್ಷಿಪಣಿ ಪರೀಕ್ಷೆ

- ಸುದ್ದಿ

ಮಹಮದ್ ಘೋರಿಯ ನೂತನ ಆಕ್ರಮಣ?

★★★

ಸೋಮನಾಥ ಚಟರ್ಜಿ ಅವಿರೋಧ ಆಯ್ಕೆ

- ಶೀರ್ಷಿಕೆ

ವಿರೋಧ ಇನ್ನು ಶುರು!!

★★★

ಭಾರತದ ಅಟಾರ್ನಿ ಜನರಲ್ ಆಗಿ ಮಿಲನ್ ಬ್ಯಾನರ್ಜಿ

- ಸುದ್ದಿ


ನ್ಯಾಯಾಂಗ - ಶಾಸಕಾಂಗಗಳ ಮಿಲನ ಈಗ ಸುಲಭ!

★★★

ಅಪ್ಪ ಎನ್ಟೀ ಸೂಪರ್ ಹೀರೋ

ಬಾಲಕ ಕೃಷ್ಣ 'ಆನ್ಟೀ' ಹೀರೋ!

- ಎಸ್ಸಾರ್‍ಮೂರ್ತಿ



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಎಲ್.ಎಸ್. ಶೇಷಗಿರಿ ರಾವ್

ಆಧುನಿಕ ಕನ್ನಡ ಯುಗದ ಅರುಣೋದಯದಲ್ಲಿ ಪ್ರಬಂಧ, ಕವನ, ಕಥೆ, ವಿಮರ್ಶೆಗಳನ್ನು ರಚಿಸಿದ ಪ್ರಾತಃಸ್ಮರಣೀಯ ಪಂಜೆ ಮಂಗೇಶರಾಯರು (1874-1937). ಅವರ 'ಕಮಲಪುರ ಹೊಟ್ಲಿನಲ್ಲಿ'' ಯನ್ನು ಕನ್ನಡದ ಮೊದಲ ನಿಜವಾದ ಸಣ್ಣಕತೆ ಎಂದೂ ಎನ್ನಬಹುದು. 1900ರಲ್ಲಿ ಇಂಥ ಸಂಪೂರ್ಣ ಕಥೆ ಪ್ರಕಟವಾಯಿತು ಎನ್ನುವುದು ಅಚ್ಚರಿಯ ಸಂಗತಿ.

ವಾಸ್ತವಿಕತೆಯನ್ನೇ ಹಿಡಿದು, ಉತ್ಪ್ರೇಕ್ಷೆ ಇಲ್ಲದೆ ಪಂಜೆಯವರು ಹಾಸ್ಯವನ್ನು ಸೃಷ್ಟಿಸುವುದು ಗಮನಾರ್ಹ. ಎರಡು ಕಥೆಯ ಪ್ರಾರಂಭದ ಎರಡು ಪುಟಗಳ ಸಾಧನೆಯೇ ಇದು. ನಿತ್ಯ ಜೀವನದ ಹತ್ತಾರು ವಿವರಗಳನ್ನು ಪೇರಿಸುತ್ತ ಹೋಗಿ ಒಂದು ವಾತಾವರಣವನ್ನು ಸೃಷ್ಟಿಸುವುದು. ಕಥಾವಸ್ತು, ಪಾತ್ರಸೃಷ್ಟಿ ಎರಡೂ ನಗೆಯ ಮೂಲಗಳೇ. ಪೂರ್ಣಸ್ವಾಮಿ ಅಯ್ಯಂಗಾರ್ಯರದು. ನಿರಪಾಯವಾದ ಅಹಂ, ಅವರು ಹೂಡುವ ಸರಳ ಉಪಾಯ ಎಳೆಎಳೆಯಾಗಿ ಅವರನ್ನು ಸುತ್ತಿಕೊಳ್ಳುವ ದೃಶ್ಯ ನಗೆಯನ್ನುಂಟು ಮಾಡುತ್ತದೆ. ಸಣ್ಣ ಕಥೆಯ ಚೌಕಟ್ಟಿನಲ್ಲಿ ಪೊನ್ನಾಮಿಯ ಪಾತ್ರ ಬಹು ಲವಲವಿಕೆಯಿಂದ ಮೂಡುತ್ತದೆ. 'ಕನ್‌ವಿನ್‌ಸಿಂಗ್' ಆಗಿದೆ. ಕಡೆಯ ಪೂರ್ಣದವರೆಗೆ ಅವನ ಖದೀಮತನ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಅಯ್ಯಂಗಾರ್ಯರ ವಿಷಯದಲ್ಲಿ ನಮಗೆ ಸಹಾನುಭೂತಿ ಮೂಡಿದರೂ ಅವರಿಗೆ ಭರಿಸಲಾಗದ ಕಷ್ಟವೇನೂ ಆಗದಿರುವುದರಿಂದ ನಮ್ಮ ನಗು ಹೊರಚೆಲ್ಲುತ್ತದೆ.

★★★

ಕಮಲಪುರದ ಹೊಟ್ಲಿನಲ್ಲಿ

– ಪಂಜೆ ಮಂಗೇಶರಾಯರು

ಕಮಲಪುರದ ಬಂದರ್ ಸ್ಥಳವು ವಸಂತ ಋತುವಿನ ಸಂಧ್ಯಾತಪದಿಂದ ಸುಖ ಹೊಂದುತ್ತಲಿತ್ತು. ವೀರಪುರದಿಂದ ಬಂದು ದಂಡೆಯಲ್ಲಿ ನಿಂತಿದ್ದ ಒಂದೆರಡು ದೋಣಿಗಳು ನೀರಿನ ಸಣ್ಣ ಅಲೆಗಳ ಮೇಲೆ ಕುಣಿಯುತ್ತಲಿದ್ದವು. ದೋಣಿಗಾರನು ಈಳಿಗೆಯನ್ನು ಕಾಲಿಂದ ಒತ್ತಿ ಹಿಡಿದು, ಕೈಯಲ್ಲಿದ್ದ ಮೀನನ್ನು ತರಿದು, ಬಳಿಯ ನೀರು ತುಂಬಿದ ಮಣ್ಣಿನ ಪಾತ್ರೆಗೆ ಒಟ್ಟುತ್ತಿದ್ದನು. ಆಗಾಗ ಹಾರಿ ಬರುವ ಕಾಗೆಗಳನ್ನು ಅಟ್ಟುತ್ತಿದ್ದನು. ಸ್ವಲ್ಪ ದೂರದಲ್ಲಿ ಅಂಬಿಗರ ಹೆಂಗಸರು ಸೊಂಟಕ್ಕೆ ಮುಟ್ಟುವಷ್ಟು ನೀರಿಗೆ ಇಳಿದು ಫಕ್ಕನೆ ಮುಳುಗು ಹಾಕಿ ಕೆಸರಿನಲ್ಲಿದ್ದ ಚಿಪ್ಪು ಮೀನುಗಳನ್ನು ಕೈತುಂಬಾ ಆಯ್ದುಕೊಂಡು ತಮ್ಮ ಮೈ ಬಟ್ಟೆಯ ಪದರಿನ ಚೀಲವನ್ನು ತುಂಬಿಸುತ್ತಿದ್ದರು. ದಡದ ಮೇಲಿದ್ದ 'ಮಾಪಿಳ್ಳೆ' ಯುವಕನು ಕೃಷ್ಣಕಾಯರಾದ ಈ ಯೋಜನಗಂಧಿಯರನ್ನು ಕದ್ದು ನೋಡುತ್ತಾ ಏನು ಏನೋ ಯೋಚಿಸುತ್ತಲಿದ್ದನು. ಎಲ್ಲಿ ನೋಡಿದರೂ ಜನಗಳ ಗಲಭೆ, ಬಂಡಿಗಳ ಚೀತ್ಕಾರ, ಹೊರೆಯಾಳುಗಳ ಕಲರವ. ಈ ಕಡೆಯಲ್ಲಿ ಗಟ್ಟದಿಂದ ಇಳಿದ ಕಾಫಿಯ ಮೂಟೆಗಳನ್ನು ಸಮುದ್ರದಲ್ಲಿನ ಹಡಗುಗಳಿಗೆ ಸಾಗಿಸುತ್ತಿರುವರು. ಇದೋ, ಇಲ್ಲಿರಾಶಿ ಹಾಕಿದ ಅಕ್ಕಿ ಹೊರೆಗಳನ್ನು ಎಣಿಸಿ ಎಣಿಸಿ ವರ್ತಕನು ಆಳುಗಳನ್ನು ಕೂಗಿ ಕರೆಯುತ್ತಿರುವನು. ಅಲ್ಲಿ ಬೊಂಬೈಯಿಂದ ಬಂದ ಜೀನಸುಗಳನ್ನು ದಡದ ಮೇಲೆ ಇಳಿಸುತ್ತಿರುವರು. ಇಲ್ಲಿ 'ಮಾನಿಫೆಸ್ತ್' ಬರೆಯುವ ಗುಮಾಸ್ತ ಮುದುಕನು ಕನ್ನಡಕದ ಕಣ್ಣುಗಳನ್ನು ಎತ್ತಿ ಹಿಡಿದು ಕಿವಿಯ ಮೇಲಿನ ಲೇಖನಿಯನ್ನು ಆಗಾಗ ಸೆಳೆಯುತ್ತಾ ಪಾರುಪತ್ಯವನ್ನು ನಡೆಸುತ್ತಲಿರುವನು. ಬಿಳಿ ಸರದಾರನೊಬ್ಬನು ಬಿಳಿ ದೋಣಿಯ ಚುಕ್ಕಾಣಿಯನ್ನು ಕೈಯಿಂದ ಹಿಡಿದು ಕಡಲ ತಡಿಗೆ ಹೋಗುತ್ತಿರುವನು. ದೋಣಿಯಲ್ಲಿ ಅವನ ಪೇದೆಯು ಕೋವಿಯನ್ನು ಹಿಡಿದು ನಿಂತಿರುವನು. ಇತ್ತ ಕೆಲವು ಮಂದಿ ಗೃಹಸ್ಥರು ವಾಯುಸೇವನೆಗೆ 'ಕಮಿಟೀ' ಮಾಡಿಕೊಂಡು ತಮ್ಮ ಭೂಷಣೆಯನ್ನೇ ಸಾರುತ್ತಿರುವರು. ಸರಕಾರದ ಆಫೀಸುಗಳ ಗುಮಾಸ್ತರೆಲ್ಲಾ ಸಾಯಂಕಾಲದ ವಿಹಾರಕ್ಕೆ ಬರುವುದಕ್ಕೆ ಇನ್ನೂ ಹೊತ್ತಾಗಿರಲಿಲ್ಲ. ಬಂದಿದ್ದವರಲ್ಲಿ ಒಬ್ಬಿಬ್ಬರು ಮೂರು ಪೈಸೆ 'ಹೊಟ್ಲ'ನ ಕಡೆ ಹೋಗುತ್ತಿದ್ದರು. ಹೊಟ್ಲಿನಲ್ಲಿ ನೈವೇದ್ಯವನ್ನು ತೀರಿಸಿದವರಲ್ಲಿ ಕೆಲವರು ಮೀಸೆಗೆ ವಸ್ತ್ರಪೂಜೆಯನ್ನು ಮಾಡುತ್ತಿದ್ದರು. ಕೆಲವು ಚುಟ್ಟಾವಿನ ಹೊಗೆಯಿಂದ ಧೂಪವನ್ನು ಹಾಕುತ್ತಿದ್ದರು. ಮತ್ತೂ ಕೆಲವರು ಬೀಡಿ ಸೇದುವುದಕ್ಕೆ ಬೆಂಕಿ ಹಚ್ಚಿ ದೀಪಾರಾಧನೆಯನ್ನು ಮಾಡುತ್ತಿದ್ದರು. ಎಲ್ಲರೂ ಹಣಕ್ಕೆ ಮೊದಲೇ ಅರ್ಘ್ಯವನ್ನು ಕೊಟ್ಟಿದ್ದರು.

'ಹೊಟ್ಲ'ನ ಯಜಮಾನರು ಪೂರ್ಣಸ್ವಾಮಿ ಅಯ್ಯಂಗಾರರು. ಈ ಹೆಸರನ್ನು ಕೆಲವರು ಪೊನ್ನುಸ್ವಾಮಿ ಎಂದು ಸಕಾರಣವಾಗಿ ಕರೆಯುವುದುಂಟು. ಏಕೆಂದರೆ, 20 ವರ್ಷಗಳ ಕೆಳಗೆ ಅಯ್ಯಂಗಾರರು ಒಂದು ಹೆಣ್ಣಿಗೋಸ್ಕರ ಊರುಬಿಟ್ಟು ಹೋಗಿದ್ದರು. ಬಳಿಕ ಶ್ರೀರಂಗ, ತಿರುಪತಿ, ಜಗನ್ನಾಥ, ರಾಮೇಶ್ವರ, ಮೊದಲಾದ ಪುಣ್ಯಸ್ಥಳಗಳಿಗೆ ಯಾತ್ರೆ ಮಾಡಿ, ಅಂತು ಸ್ವಲ್ಪ ಹಣವನ್ನು ಹೇಗೋ ಕಟ್ಟಿಕೊಂಡು, ಮರಳಿ ಕಮಲಪುರಕ್ಕೆ ಬಂದು, ಈ 'ಹೊಟ್ಲ'ನ್ನು ಪರೋಪಕಾರಾರ್ಥವಾಗಿಯೇ ಇಲ್ಲಿ ಸ್ಥಾಪಿಸಿದರು.

ಯಾತ್ರೆಗಳಿಂದ ಲಾಭವುಂಟೆಂದು ಹೇಳುವರು. ನಮ್ಮ ಅಯ್ಯಂಗಾರರಾದರೂ, ದೇಶವಿದೇಶದ ಮಿಠಾಯಿಯ ಕ್ರಮವನ್ನೂ, ನಾನಾ ಭಾಷೆಗಳ ಅಲ್ಪಸ್ವಲ್ಪ ಪರಿಚಯವನ್ನೂ, ಆಶ್ಚರ್ಯಕರವಾದ ಸಮಾಚಾರ ಸಂಗ್ರಹವನ್ನೂ ಮಾಡಿಕೊಂಡಿದ್ದರು. ಅವರಿಗೆ ಮಕ್ಕಳು ಮರಿ ಇರಲಿಲ್ಲ. ಆದರೂ ನಲ್ಲೂರು ನೀಲಾಂಬೆಯ ಕಿರಿಯ ಮಗನು ಮಾತ್ರ ಇವರನ್ನು 'ಅಪ್ಪಾ! ಅಪ್ಪಯ್ಯ!' ಎಂದು ಕೂಗಿ ಕರೆಯುತ್ತಾ ದಿನಕ್ಕೆ ಎರಡು ಬಾರಿ ಕಾಸುಕೊಂಡು ಹೋಗುತ್ತಿದ್ದನು. ಸ್ವತಂತ್ರವಾದ ಜೀವನವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ 'ಹೊಟ್ಲ'ನ್ನು ತಾನು ಮಾಡಿರುವೆನಲ್ಲದೆ, ಅದರಿಂದ ಪ್ರಯೋಜನಾಂಶವೇನು ಇಲ್ಲವೆಂದು ಅವರು ಯಾವ ಕಾರಣದಿಂದಲೋ ಗೊಣಗುಟ್ಟುತ್ತಿದ್ದರು. ಆದರೂ ಗ್ರಾಹಕರ ಸಂಖ್ಯೆ ದಿನೇ ದಿನೇ ಏರಿ ಹೋಗುತ್ತಲಿತ್ತು. ಒಂದು ಪೈಸೆಯ ಕಾಫಿ ಕುಡಿಯುವುದಕ್ಕೆ ಬಂದವನು ಸಹ ಅಯ್ಯಂಗಾರರ ಯಾತ್ರಾ ಸಮಾಚಾರವನ್ನು ಕೇಳುತ್ತ ಕೇಳುತ್ತ, ತಿಂದ ತಿಂಡಿಯನ್ನೇ ತಿಳಿಯದೇ, ಉಡಿಯಲ್ಲಿದ್ದ ಹಣವನ್ನೆಲ್ಲಾ ಸಮರ್ಪಿಸಿ ಹೋಗುತ್ತಿದ್ದನು. ಒಬ್ಬಿಬ್ಬರು, ಅಯ್ಯಂಗಾರರು ತಮ್ಮ ಸಮಾಚಾರಗಳ 'ಮೂಟೆಯನ್ನು ಬಿಚ್ಚುವಂತೆ' ಮಾಡಿ, ಅವರು ಅದರ ಆನಂದದಲ್ಲಿ ಮಗ್ನರಾಗಿದ್ದ ಸಮಯ ನೋಡಿ, ಮೆಲ್ಲನೆ ಮಾಯವಾಗುತ್ತಿದ್ದರು. ತತ್‌ಕ್ಷಣದಲ್ಲಿಯೇ ಅಯ್ಯಂಗಾರರು ಬೆಚ್ಚಿಬಿದ್ದಂತಾಗಿ, ಅವರ ಬೆನ್ನು ಹಿಡಿದು, ಹಣವನ್ನು 'ವಸೂಲ್' ಮಾಡುತ್ತಿದ್ದರು.

ಮೊದಲು ಮೊದಲು ಪೂರ್ಣ ಸ್ವಾಮಿಯವರಿಗೆ ಕಮಲಪುರದ ಯುವಕರನ್ನು ಕುರಿತು ಒಳ್ಳೆಯ ಅಭಿಪ್ರಾಯವಿತ್ತು. ಇತ್ತಲಾಗೆ ಆ ಅಭಿಪ್ರಾಯವು ಬೇರೆಯಾಗಿ ಹೋಯಿತು. ಅನೇಕ ಗ್ರಾಹಕರು ಲಡ್ಡು ತಿನ್ನುವ ಬದಲಾಗಿ ದುಡ್ಡುತಿನ್ನಲು ಪ್ರಾರಂಭಿಸಿದರು. ಈ ರೋಗವನ್ನು ನಿವಾರಿಸುವುದಕ್ಕೆ ಅಯ್ಯಂಗಾರರು ನಾನಾ ಉಪಾಯ ಮಾಡಿದರು. ಬರತಕ್ಕ ಹಣವನ್ನು ಲೆಕ್ಕದ ಪುಸ್ತಕದಲ್ಲಿ ಮುಂದೆ ಸಾಗಿಸುತ್ತ ಹೋದರು. ಕಾರಣಾಂತರಗಳಿಂದ ದೂರ ದೇಶಗಳಿಗೆ ಹೋಗಿದ್ದ ಪ್ರಿಯ ಗ್ರಾಹಕರಿಗೆ ತನ್ನ ಕ್ಷೇಮವಾರ್ತೆಯನ್ನು ಕುರಿತು ಕಾಗದಗಳನ್ನು ಬರೆದು ನೋಡಿದರು. 'ಬಡವನ ಬಿನ್ನಹ' ಎಂದು ಹಲಗೆಯಲ್ಲಿ ಸಾಲಗಾರನ ಹೆಸರು ಬರೆದು ಹೊಟ್ಲಿನ ಗೋಡೆಗೆ ತೂಗಾಡಿದರು. ಕೊನೆಗೆ ಲೆಕ್ಕವನ್ನು ಹೇಗೂ ಸರಿಮಾಡದೆ ಬಿಡಲಿಲ್ಲ. ಆರು ವರ್ಷಗಳಿಂದ ಸಾಗಿಸಿ ತಂದ ಸಾಲಗಾರರ ಹೆಸರನ್ನೆಲ್ಲಾ ಲೆಕ್ಕದ ಪುಸ್ತಕದಲ್ಲಿ ಕೆಂಪು ಶಾಯಿಯ ಗೆರೆಗಳಿಂದ ಅಡಗಿಸಿಬಿಟ್ಟರು.

ಈ ದಿನ ಸಾಯಂಕಾಲದಲ್ಲಿ 'ಹೊಟ್ಲ'ನೊಳಕ್ಕೆ ಅನೇಕರು ಕೂಡಿದ್ದರು. ಕರಿಯೂರು ಶ್ಯಾಮರಾಯರು ಗೋಧಿಯ ರೊಟ್ಟಿಯನ್ನು ಕಾಫಿ ತುಂಬಿದ ಪಾತ್ರೆಯಲ್ಲಿ ನೆನೆ ಹಾಕುತ್ತಿದ್ದರು. ಮಲೆನಾಡು ಕುಪ್ಪಣ್ಣನವರು 'ಟೀ ಗ್ಲಾಸನ್ನು' ಮುಂದಿರಿಸಿ, ತುಟಿಯಿಂದ ಮೆಲ್ಲ ಮೆಲ್ಲನೆ ಚೀಪುತ್ತಿದ್ದರು. ಇವರಿಬ್ಬರ ಮೇಲೆ ಅಯ್ಯಂಗಾರರು ವಕ್ರವಾಗಿದ್ದರು.

ಅಯ್ಯಂಗಾರರಿಗೆ ಸಿಟ್ಟು ಬರುವುದೆಂದೇ ಇವರಿಬ್ಬರೂ ಕುಚೇಷ್ಟೆಯನ್ನು ಆರಂಭಿಸುತ್ತಿದ್ದರು. ಎರಡು ದಿನಗಳ ಹಿಂದೆ ಈ ಪುಣ್ಯಾತ್ಮರು 'ಹೊಟ್ಲ'ನಲ್ಲಿ ಹೊಟ್ಟೆ ತುಂಬಾ ತಿಂದು, ಕುಡಿದು, ಅಯ್ಯಂಗಾರರನ್ನು ಕೆರಳಿಸಿ ಹೋಗಿಬಿಟ್ಟಿದ್ದರು. ಅಯ್ಯಂಗಾರರು ''ಸ್ವಂತ ಅನುಭವ''ವನ್ನು ಕುರಿತು ಕೆಲವು ಮಾತುಗಳನ್ನು ಬಂದವರೊಡನೆ ಮನೋರಂಜನೆಗಾಗಿ ಹೇಳುತ್ತಿದ್ದಾಗ, ಅಯ್ಯಂಗಾರರು ಹೇಳುವುದೆಲ್ಲಾ

ಸುಳ್ಳೆಂದೂ, ಗ್ರಾಹಕರು ತನ್ನೊಡನೆ ತಿಳಿದು ತಿಳಿಯದೆ ಹೆಚ್ಚು ವ್ಯಾಪಾರ ಮಾಡುವುದಕ್ಕೋಸ್ಕರ ಅತಿಶಯೋಕ್ತಿಯನ್ನು ಹೇಳುವ ಉಪಾಯ ಮಾಡಿರುವುದೆಂದೂ ಈ ಮುಟ್ಠಾಳರು ಜಗಳವಾಡಿದರು. ಅಯ್ಯಂಗಾರರು ತಾನೆಂದ ಸಮಾಚಾರ ಸುದ್ದಿಯೆಲ್ಲಾ ಸುಳ್ಳಲ್ಲವೆಂದು ಈ ಅಧಮರಿಗೆ ಮನಗಣಿಸುವ ಉಪಾಯವನ್ನು ನಿಶ್ಚಯಿಸಿದರು. ಈ ದಿನ ಕುಪ್ಪಣ್ಣನವರು ಕಲಹಕ್ಕೆ ನಾಂದಿಯಾಗಿ ''ರಾಯರೇ! ಅಯ್ಯಂಗಾರರು ರಾಮೇಶ್ವರ ಸಮುದ್ರವನ್ನು ಈಸಿಹೋದ ಸಂಗತಿಯನ್ನು ಬಲ್ರೇ'' ಎಂದು ಕೇಳಿದರು.

ಪೂರ್ಣಸ್ವಾಮಿ ಅಯ್ಯಂಗಾರರು ಎಂದಿನಂತೆ ಹುಬ್ಬು ಗಂಟಿಕ್ಕದೆ, ಮನಸ್ಸಿನೊಳಗೆ ಆನಂದದಿಂದ ಉಕ್ಕುತಲಿದ್ದರು.

ಶ್ಯಾಮರಾಯ: ''ಅಂದು ನಿಮ್ಮೊಡನೆ ಯಾರಿದ್ದರು ಅಯ್ಯಂಗಾರ್ರೇ? ಈ ಆಪತ್ತಿನಿಂದಲೂ ನಿಮ್ಮನ್ನು ಪಾರು ಮಾಡಿಸಿದವರು ಆ ಗುಂಡಾಚಾರ್ರೆ?''

ಕುಪ್ಪಣ್ಣ: ''ಹಾಗಾಗಿರಬೇಕು. ಇಲ್ಲವಾದರೆ ನಮ್ಮ ಅಯ್ಯಂಗಾರರ್ರು ಅಂಡಮಾನ್ ದ್ವೀಪಗಳಿಗೆ ಹೋಗುತ್ತಿದ್ದರೋ ಏನೋ?''

ಅಯ್ಯಂಗಾರರು ಮೌನವ್ರತವನ್ನು ಅವಲಂಬಿಸಿದ್ದುದನ್ನು ನೋಡಿ, ಶ್ಯಾಮರಾಯರು ''ನಿಮ್ಮ ಗುಂಡಾಚಾರ್ರು ಈಗ ತಾನೇ ಎಲ್ಲಿರುವರು?'' ಎಂದು ಕೇಳಿದರು.

ಇಷ್ಟರಲ್ಲಿ ಯಾರೋ ಒಬ್ಬರು 'ಹೊಟ್ಲ್'ನ ಒಳಕ್ಕೆ ಕಾಲಿಟ್ಟರು. ಅಯ್ಯಂಗಾರರು ಕಾರ್ಯಾಂತರದಿಂದ ಒಳಕ್ಕೆ ಹೋಗಿದ್ದರಿಂದಲೂ, ಉಳಿದವರ ಪರಿಚಯವು ವ್ಯಕ್ತಿಗೆ ಇಲ್ಲದಿದ್ದುದರಿಂದಲೂ, ಬಂದವನು ಒಂದು ನಿಮಿಷ ಅಲ್ಲಿಯೇ ನಿಂತುಬಿಟ್ಟನು. ಅಯ್ಯಂಗಾರರು ಹೊರಕ್ಕೆ ಬರುತ್ತಲೇ ವ್ಯಕ್ತಿಯನ್ನು ನೋಡಿ ಉಬ್ಬಿದರು. ಬಂದವನು ಪ್ರತಿಯಾಗಿ ನಗುವನ್ನು ತೋರಿಸುತ್ತ ''ಏನ್ ಅಯ್ಯಂಗಾರರೇ? ಕ್ಷೇಮವೇ?'' ಎಂದು ಕೇಳಿದನು.

ಅಯ್ಯಂಗಾರರು ಬಂದವನನ್ನು ಯಥೋಚಿತವಾಗಿ ಮನ್ನಿಸಿ ''ಎಂದು ಬಂದ್ರಿ ಗುಂಡಾಚಾರ್ರೆ?'' ಎಂದು ಕೇಳಿದರು.

ಉಳಿದವರು ಸ್ತಬ್ಧರಾಗಿ ಬಂದವನನ್ನು ಕಣ್ಣಿಟ್ಟು ನೋಡುತ್ತಾ ಕುಳಿತರು.

ವ್ಯಕ್ತಿಯು ''ಅಯ್ಯಂಗಾರರೇ! ಏನು ಹೇಳಲಿ! ನಿಮ್ಮನ್ನು 10 ವರ್ಷಗಳಿಂದ ತಾವು ಹುಡುಕುತ್ತಿದ್ದೇವೆ. ಈ ಹೊತ್ತು ನಿಮ್ಮ ದರ್ಶನವಾಯಿತು'' ಎಂದು ಹೇಳಿ ದಣುವನ್ನು ಆರಿಸುತ್ತಿದ್ದರು. ಅಯ್ಯಂಗಾರರು ಸ್ವಲ್ಪ ಆಲೋಚಿಸಿದಂತೆ ಮಾಡಿ, ''ಆ ಬಳಿಕ ನಮಗೂ ತಮಗೂ ಭೇಟಿ ಸಿಗಲಿಲ್ಲ ಅಲ್ಲವೇ?'' ಎಂದು ಕೇಳಿ ನಗುತ್ತ, ಕುಪ್ಪಣ್ಣನವರನ್ನು ನೋಡಿದರು.

ಕುಪ್ಪಣ್ಣ: 'ಯಾರ ಭೇಟಿ?'

ಅಯ್ಯಂಗಾರರು ಅಲಕ್ಷ್ಯದಿಂದ ''ನಮಗೂ ತಮಗೂ ಆ ಮೇಲೆ ದರ್ಶನವಾಗಿಲ್ಲ. ನಾನು ರಾಮೇಶ್ವರ ಸಮುದ್ರ ದಾಟಿ, ಮುಳುಗಿದ ಹಡಗನ್ನು ಬೆನ್ನುಕೊಟ್ಟು ತೇಲಿಸಿ ಕುಮಾರಿಯ ಭೂಶಿರವನ್ನು ಮುಟ್ಟಿದ ಮೇಲೆ ತಮ್ಮನ್ನು ನೋಡಲಿಲ್ಲ, ನಿಜ'' ಎಂದು ಹೇಳಿ ಶ್ಯಾಮರಾಯರ ಮೋರೆಯನ್ನು ದೃಷ್ಟಿಸಿದರು.

ವ್ಯಕ್ತಿಯು "ಸರಿ ಸರಿ, ಆ ದಿನಗಳೆಲ್ಲಾ ಹೋಯ್ತು. ಈಗ ನಮ್ಮ ಮಾತುಗಳನ್ನು ಕೂಡಾ ನಂಬುವವರು ಯಾರೂ ಇಲ್ಲ" ಎಂದು ಹೇಳಿ ತನ್ನನ್ನೇ ನೋಡುತ್ತಿದ್ದ ಕುಪ್ಪಣ್ಣನವರನ್ನು ಕುರಿತು ಅಯ್ಯಂಗಾರರೊಡನೆ "ಇವರು ಯಾರು?" ಎಂದು ಕೇಳಿದನು.

ಕುಪ್ಪಣ್ಣನವರು ಈ ಸಂದರ್ಭವನ್ನು ಹಿಡಿದು ಮಾತನಾಡುವಂತೆ ಮುಂದೆ ಬಂದು "ಆಚಾರ್ರೆ?! ನಿಮ್ಮ ಹೆಸರನ್ನು ನಾವು ಅಯ್ಯಂಗಾರರ ಬಾಯಿಂದ ದಿನೇ ದಿನೇ ಕೇಳಿ ಗೊತ್ತುಂಟು. ನಮ್ಮ ಪೂರ್ಣಸ್ವಾಮಿ ಅಯ್ಯಂಗಾರರು ಕಾವೇರಿ ಸ್ನಾನದಲ್ಲಿ...."

ವ್ಯಕ್ತಿಯು "ಹೌದು! ಹೌದು!" ಎಂದು ತಲೆದೂಗಿ "ಅವರನ್ನು ರಕ್ಷಿಸಿದ ಗುಂಡಾಚಾರ್ರು ನಾವು. ನಾವು ಇಲ್ಲದಿದ್ರೆ ನಮ್ಮ ಅಯ್ಯಂಗಾರರು ಅಂದು ಮೊಸಳೆಗೆ ಆಹುತಿಯಾಗುತ್ತಿದ್ದರು. ಏನ್ ಅಯ್ಯಂಗಾರರೇ? 50 ಅಡಿ ಉದ್ದ ಮೊಸಳೆ ಎಲ್ಲಿ? ನಮ್ಮ ಚಿಕ್ಕದೊಂದು ಪವಿತ್ರ ದರ್ಭೆ ಎಲ್ಲಿ? ಇವರು ಯಾರು! ಎಂದು ಅಯ್ಯಂಗಾರರೊಡನೆ ಕೇಳಿದರು.

ಅಯ್ಯಂಗಾರರು ಅಲಕ್ಷ್ಯದಿಂದ "ಅವರು ದಲಾಲ ಕುಪ್ಪಣ್ಣ, ನಾವೆನ್ನುವುದೆಲ್ಲಾ ಸುಳ್ಳೆಂದು ಹೇಳುವ ಗೃಹಸ್ಥರು. ನಮಗೆ ಅವರ ಗೊಡವೆ ಯಾಕೆ? ಈ ಊರಲ್ಲಿ ಯಾರು ಅವನ್ನು ಬಲ್ಲರು?" ಎಂದು ಹೇಳಿದರು.

ಶ್ಯಾಮರಾಯ: "ಇವರೇ ಏನ್ ಗುಂಡಾಚಾರ್ರು?"

ಗುಂಡಾಚಾರ್ಯ: ಕಾವೇರಿ ಸ್ನಾನದಲ್ಲಿ ಮೊಸಳೆ ಬಾಯಿಂದ ಅಯ್ಯಂಗಾರರನ್ನು ಬಿಡಿಸಿ, ಕಾಯ್ದ ಗುಂಡಾಚಾರ್ಯರು ನಾವೇ! ಮಲೆಯಾಲ ಸೀಮೆಯಲ್ಲಿ ಅಯ್ಯಂಗಾರರು ರೋಗದಿಂದ ಹಾಸಿಗೆ ಹಿಡಿದು ಮಲಗಿದ್ದಾಗ, ಅವರ ಆರೈಕೆಯನ್ನು ನೋಡಿ ಅವರನ್ನು ಬದುಕಿಸಿದ ಗುಂಡಾಚಾರ್ಯರೂ ನಾವೇ! 'ನಿನ್ನನ್ನು ಎಂದು ಮರೆಯಲಾರೆ! ನಿನ್ನನ್ನು ಎಂದೂ ಬಿಟ್ಟು ಹಾಕಲಾರೆ' ಎಂದು ಅಯ್ಯಂಗಾರರು ನನಗೆ ಮಾತು ಕೊಟ್ಟಿದ್ದರು. ನಾನು ಒಬ್ಬಂಟಿಗನಾಗಿ ತಿರುಗಾಡುತ್ತಿದ್ದಾಗ, ಎಷ್ಟೋ ಸಲ ಅಯ್ಯಂಗಾರರನ್ನು ನೆನೆದೆ. ಒಂದು ಸಲ ಅಯ್ಯಂಗಾರರನ್ನು ನೋಡಿದರೆ, ನನ್ನ ಕಷ್ಟಗಳೆಲ್ಲಾ ಪರಿಹಾರವಾಗುವುವು ಎಂದು ತಿಳಿದುಕೊಂಡೆ. ಶ್ರೀ ಕೃಷ್ಣನ ದಯೆಯಿಂದ ಈ ಹೊತ್ತು ಅವರನ್ನು ನೋಡಿ ಧನ್ಯನಾದೆ. "ಅಯ್ಯಂಗಾರ್ರೇ! ಎಲ್ಲಾ ಮರೆತಿರುವಿರೇ?"

ಅಯ್ಯಂಗಾರ: "ಇಲ್ಲ! ಸ್ವಾಮಿ! ನನ್ನ ಪ್ರಾಣ ಉಳಿದದ್ದು ತಮ್ಮಿಂದ. ತಮ್ಮ ಉಪಕಾರವನ್ನು ಆಜನ್ಮ ಮರೆಯಲಾರೆ. ಪ್ರತ್ಯುಪಕಾರ ಮಾಡಲು ಸಾಮರ್ಥ್ಯವಿದ್ದರೆ ನಾನು ಸಿದ್ಧನಾಗಿದ್ದೇನೆ."

ಕುಪ್ಪಣ್ಣ: "ಅವರು ಸಾಯುವ ಹಾಗಿದ್ದರೆ, ನೀವು ಸಹಾಯ ಮಾಡುವುದೇ ಪ್ರತ್ಯುಪಕಾರ."

ಅಷ್ಟರಲ್ಲಿ ಅಯ್ಯಂಗಾರರ ಮಾತಿನ ಪ್ರಕಾರ ನೌಕರನು ಕಾಫಿ ತುಂಬಿದ ಪಾತ್ರೆಗಳನ್ನು ತಿಂಡಿಯ ದೊನ್ನೆಗಳನ್ನು ತಂದಿಟ್ಟನು. ಗುಂಡಾಚಾರ್ಯರು ಒಂದು ಕಣ್ಣನ್ನು ಭಕ್ಷ್ಯದ ಕಡೆಗು ಒಂದು ಕಣ್ಣನ್ನು ಕುಳಿತವರ ಕಡೆಗೂ ಇಟ್ಟು, "ಅದಕ್ಕಿಂತಲೂ ಸಿಂಹಳ ದ್ವೀಪದಲ್ಲಿ ಇವರನ್ನು ಮೂರು ಕಾಡಾನೆಗಳು ಅಟ್ಟಿಕೊಂಡು ಬಂದಾಗ ನಾವು...." ಎಂದು ಅರೆನುಡಿಯಲ್ಲಿ ತಿಂಡಿಯನ್ನು ನೋಡುತ್ತ ಕುಳಿತರು.

ತಮ್ಮ 'ಟಿಫಿನ್' ತೀರಿಸಿ ಕುಳಿತ ಕುಪ್ಪಣ್ಣ, ಶ್ಯಾಮರಾಯರು ಇವರ ಸಮಾಚಾರಕ್ಕೆ ಆಸೆಗೊಂಡು, ಗುಂಡಾಚಾರ್ಯರ ಹತ್ತಿರಕ್ಕೆ ಬಂದರು. ಅಯ್ಯಂಗಾರರು ''ತಿನ್ನಿ! ತಿನ್ನಿ!'' ಎಂದು ಹೇಳಿದಾಗ ಈ ಮಾತನ್ನು ತನ್ನನ್ನು ಉದ್ದೇಶಿಸಿ ಹೇಳಿದ್ದೆಂದು ತಿಳಿದು, ಕುಪ್ಪಣ್ಣನವರು ದೊನ್ನೆಯೊಳಗೆ ಬೆರಳು ಮುಳುಗಿಸಿ, ಎಡಗೈಯಿಂದ ಕಾಫಿಯ ಪಂಚಪಾತ್ರೆಯನ್ನು ಹಿಡಿದುಕೊಂಡರು. ಶ್ಯಾಮರಾಯರ ಕೈಗಳೂ ಹಾಗೆಯೇ ಮಾಡತೊಡಗಿದುವು. ಅಯ್ಯಂಗಾರರು ಚೇಳು ಕಚ್ಚಿದ ಮೋರೆ ಮಾಡಿದರು.

ನಿಮಿಷ ಮಾತ್ರದಲ್ಲಿ ಭಕ್ಷ್ಯವೆಲ್ಲಾ ಮಾಯವಾಯಿತು. ಗುಂಡಾಚಾರ್ಯರು ''ಇನ್ನೂ ದಣಿವು ಆರಲಿಲ್ಲ'' ಎಂದು ಬೇಸರದಿಂದ ಹೇಳಿದರು. ಅಯ್ಯಂಗಾರರು ಉಳಿದ ಇಬ್ಬರನ್ನು ವಕ್ರದೃಷ್ಟಿಯಿಂದ ನೋಡುತ್ತ, ಮನಸ್ಸಿಲ್ಲದ ಮನಸ್ಸಿನಿಂದ ಮತ್ತಿಷ್ಟನ್ನು ಗುಂಡಾಚಾರ್ಯರ ಕೈಬಳಿಯೇ ತಂದಿಟ್ಟು, ''ಮಾರಾಯ್ರೇ! ನಾನು ಮುಂಚೆ ಹೇಳಿದ ಸಂಗತಿಯೆಲ್ಲಾ ಪೂರ್ಣ ಸತ್ಯವೆಂದು ಈಗ ನಂಬುಗೆಯಾಯ್ತೆ?'' ಎಂದು ಕೇಳಿದರು.

ಕುಪ್ಪಣ್ಣ: ''ಈ ಹೊತ್ತಿನ ಫಲಾಹಾರದಲ್ಲಿ ಮೊಸಳೆಯ ಸಂಗತಿಯೊಂದು ನಿಶ್ಚಯವೆಂದು ಕಂಡುಬಂತು- ಗುಂಡಾಚಾರ್ರೇ! ಇಲ್ಲಿ ಎಷ್ಟು ದಿನವಿರುವಿರಿ?''

ಗುಂಡಾಚಾರ್ಯ: ''ನಮ್ಮ ಋಣಾನುಬಂಧ ಇದ್ದಷ್ಟು ದಿನಾ ಇಲ್ಲಿ ಇರುವೆವು.''

ಅಯ್ಯಂಗಾರರಿಗೆ ಈ ಮಾತು ತಾನೇ ರುಚಿಸಲಿಲ್ಲ. ಗುಂಡಾಚಾರ್ಯರು ಕೈತೊಳೆದು ನಶ್ಯವನ್ನು ಕೇಳಿದರು. ಅಯ್ಯಂಗಾರರು ನಶ್ಯದ ಡಬ್ಬಿಯನ್ನು ಕೊಟ್ಟರು. ಗುಂಡಾಚಾರ್ಯರು ನಶ್ಯವನ್ನು ಕೈಯಲ್ಲಿ ಸುರಿದು, ಡಬ್ಬಿಯನ್ನು ಶ್ಯಾಮರಾಯರ ಕೈಗಿತ್ತರು. ಇವರು ಎರಡು ಮೂರು ಸಲ ಕೈಯಲ್ಲಿ ಕೊಂಡರೂ ಚಿವಟಿಯು ಸರಿಬಾರದೆ ಇದ್ದುದರಿಂದ, ಅರ್ಧ ತೊಲೆ ನಶ್ಯವನ್ನು ಮೂಗಿಗೆ ಸೇರಿಸುವ ಬದಲು ತಮ್ಮ ಡಬ್ಬಿಗೆ ಸೇರಿಸಿ ಬಿಟ್ಟರು. ಅಯ್ಯಂಗಾರರು ಹಲ್ಲು ಕಿತ್ತ ಹಾವಿನಂತೆ ತಳಮಳಗೊಂಡರು. ಕೊನೆಗೆ ಶ್ಯಾಮರಾಯರೂ ಕುಪ್ಪಣ್ಣನವರೂ ಮರುದಿನ ಬರುವೆವು ಎಂದು ಇಬ್ಬರಿಗೂ ಅಭಯ ಕೊಟ್ಟು ನಡೆದುಬಿಟ್ಟರು.

ಗ್ರಾಹಕರೆಲ್ಲರೂ 'ಹೊಟ್ಲಿಂದ' ಹೋದ ಬಳಿಕ ಗುಂಡಾಚಾರ್ಯರು ಮೀಸೆ ತಿರುವುತ್ತ ''ಅಯ್ಯಂಗಾರರೇ! ನಾನು ಮಾಡಿದ್ದು ಹ್ಯಾಗಾಯಿತು? ಆ ಪಾಪಿಗಳು ನಿಮ್ಮನ್ನು ನಂಬುವ ಹಾಗೆ ಮಾಡಿದೆನೋ ಇಲ್ಲವೋ ಹೇಳಿ'' ಎಂದರು.

ಅಯ್ಯಂಗಾರ: ಸ್ವಲ್ಪ ಸಾನೇ ಮೀರಿ ಹೋಯ್ತು. ನಾನು ಹೇಳಿದಷ್ಟೇ ಆಡಿದ್ದರೆ ಚೆನ್ನಾಗಿತ್ತು. ನೀನು ಸುಳ್ಳು ಹೆಚ್ಚು ಬೆರೆಸಿಬಿಟ್ಟೆ.''

ಗುಂಡಾಚಾರ್ಯ: ''ಹಾಗೆ ಮಾಡಿದ್ರಿಂದ ಆ ಪಾಪಿಗಳು ನಂಬಿದ್ರು. ನಾನು ಬಣ್ಣ ಹಾಕಿದ್ರ ನನ್ನ ಮಾತುಗಳನ್ನು ಯಾರು ಸುಳ್ಳೆಂದು ಹೇಳಲಾರ್ರು.''

ಅಯ್ಯಂಗಾರ: ''ನನ್ನ ನಶ್ಯವೆಲ್ಲಾ ಹಂಚಿಬಿಟ್ಟು ಖಾಲಿ ಡಬ್ಬಿಯನ್ನು ಇಟ್ಟಿದ್ದಿ.''

ಗುಂಡಾಚಾರ್ಯ: ''ನಾನು ಮಾತನಾಡುತ್ತಾ ಸ್ವಲ್ಪ ಆವೇಶಗೊಂಡಂತಾದೆ, ನೀವು ಹೇಳಿದ್ದನ್ನೆಲ್ಲಾ ಮರೆತುಬಿಟ್ಟೆ.''

ಅಯ್ಯಂಗಾರ: ''ಹೌದು, ನಾಡದು ಆಗಬೋಟು ಹತ್ತಿ ಕೊಸ್ನೂರಿಗೆ ಹೋಗುತ್ತೇನೆಂದು ಅವರೊಡನೆ ಹೇಳದೆ ಹೋದೆ.''

ಗುಂಡಾಚಾರ್ಯ: ''ನಾಳೆ ಹೇಳಿದರೆ ಸರಿಯಷ್ಟೇ. ಅದು ಹೋಗಲಿ! ನಾವು ಮಾಡಿದ ಆಟ ಆ ಮುಠ್ಠಾಳರ ಕಣ್ಣು ಕಟ್ಟಿತು.''

ಅಯ್ಯಂಗಾರ: ''ನಾಳೆ ಬೆಳಗಿನಿಂದಲೇ ನೀನು ಹೋಗುವೆನೆಂದು ಮೆಲ್ಲನೆ ಹೇಳುತ್ತಿರು. ಅಳಿಯನ ಮನೆಗೆ ಹೋಗುವೆನೆಂದು ಹೇಳು. ನಾಡದು ಹೋಗೋದಾದ್ರೆ, ನಮ್ಮ ಕರಾರ್ ಪ್ರಕಾರ ಒಂದು ವರಹಾ ಕೊಡುತ್ತೇನೆ.''

ಗುಂಡಾಚಾರ್ಯರು ನಗುವನ್ನು ಅಡಗಿಸಿ ಮಾತೆತ್ತುವಷ್ಟರಲ್ಲಿ, ಯಾರೋ ಒಬ್ಬರು ಹೊಟ್ಲಿನ ಬಾಗಿಲ ಹಿಡಿದು ಕರೆದರು. ಅಯ್ಯಂಗಾರರು ಧ್ವನಿಯಿಂದ ಕುಪ್ಪಣ್ಣನವರಾಗಿರಬೇಕು ಎಂದು ತಿಳಿದು, ''ಇಷ್ಟು ಹೊತ್ತಿಗೆ ಕಾಫಿ ಸಿಕ್ಕಲಾರದಯ್ಯ! ಎಂದು ಹೇಳಿ ಒಳಕ್ಕೆ ನಡೆದುಬಿಟ್ಟರು. ಗುಂಡಾಚಾರ್ಯರು ಹೊಟ್ಟೆಗೆ ಹಸಿವಿಲ್ಲದುದರಿಂದ ಅಯ್ಯಂಗಾರರ ಹಾಸಿಗೆಯನ್ನು ಹಾಸಿ ಮಲಗಿಬಿಟ್ಟರು. ಅಯ್ಯಂಗಾರರು ಊಟ ತೀರಿಸಿ ಶಯ್ಯಾಸೀನರಾದ ಗುಂಡಾಚಾರ್ಯರನ್ನು ನೋಡಿ, ಮನದೊಳಗೆ ಕುದಿಯುತ್ತ, ಹಲ್ಲು ಮಸೆಯುತ್ತ, ಒಳಕ್ಕೆ ಹೋದರು.

ಭಾನುವಾರ ಆಗಬೋಟು ಕಮಲಪುರಕ್ಕೆ ಮುಟ್ಟಿತು. ಅಯ್ಯಂಗಾರರು ಆಗಬೋಟು ಬಂದಿದೆ ಎಂದು ಎರಡು ಮೂರು ಸಲ ಗುಂಡಾಚಾರ್ಯರಿಗೆ ತಿಳಿಸಿದರು. ಗುಂಡಾಚಾರ್ಯರು ಈ ಮಾತನ್ನೇ ಕಿವಿಗೆ ಹಾಕಿಕೊಳ್ಳಲಿಲ್ಲ. 'ಹೊಟ್ಲಿನಲ್ಲಿ' ಬಂದವರೆಲ್ಲರೂ ''ಗುಂಡಾಚಾರ್ಯರು ಈ ದಿನ ಹೋಗುವವರು'' ಎಂಬುದನ್ನು ತಿಳಿದಿದ್ದರು. ಆದರೆ ಗುಂಡಾಚಾರ್ಯರು ಬಂದವರೊಡನೆ ಮಾತುಕಥೆ ನಡೆಸುತ್ತಿರುವಾಗ ತನ್ನ ಪ್ರಸ್ತಾಪವನ್ನು ಕುರಿತು ಒಂದು ಸೂಚನೆಯನ್ನು ಹಾಕಲಿಲ್ಲ. ಅಯ್ಯಂಗಾರರು ಅವರ ಮಾತುಗಳ ಪ್ರಸ್ತಾಪವನ್ನು ಆಗಾಗ ತಿರುಗಿಸಲು ಪ್ರಯತ್ನಿಸಿದರು, ಆದರೆ, ಅಯ್ಯಂಗಾರರು ಹೊನ್ನೂರ ರಥೋತ್ಸವವನ್ನು ಪ್ರಸ್ತಾಪಿಸಿ ಹುಬ್ಬುಗಳನ್ನು ಮೀಟುವಾಗ ಗುಂಡಾಚಾರ್ಯರು ಪ್ಲೇಗ್ ಔಷಧವನ್ನು ಕುರಿತು ಮಾತನಾಡುತ್ತಿದ್ದರು. ಅಯ್ಯಂಗಾರರು ಇದನ್ನೆಲ್ಲ ಬಹಳ ತಾಳ್ಮೆಯಿಂದ ಸಹಿಸಿದರು. ಗಿರಾಕಿಗಳೆಲ್ಲರೂ ಕತ್ತಲಾದ ಬಳಿಕ ತಂತಮ್ಮ ಮನೆಗೆ ಹೋದರು.

ಅಯ್ಯಂಗಾರರು ಸಿಟ್ಟಿನಿಂದ ಕಿಡಿಕಿಡಿಯಾಗಿ, ''ಇದರ ಅರ್ಥವೇನು? ಎಂದು ಒದರಿದರು.

ಗುಂಡಾಚಾರ್ಯರು ಸಮಾಧಾನದಿಂದ ''ಯಾವುದರ ಅರ್ಥ? ಪೊನ್ಸಾಮಿ'' ಎಂದರು.

''ನನ್ನನ್ನು ಪೊನ್ನುಸ್ವಾಮಿ ಎಂದು ಕರೀಬೇಡ. ನಾಳೆ ಬಳಿಗ್ಗೆ ನೀನು ಇಲ್ಲಿಂದ ಹೊರಡಬೇಕು ನೋಡು!'' ಎಂದು ಗರ್ಜಿಸಿದರು.

ಗುಂಡಾಚಾರ್ಯ: ''ಹೋಗಬೇಕು? ಎಲ್ಲಿ ಹೋಗಬೇಕು?''

ಅಯ್ಯಂಗಾರ: ''ಬೇಕಾದಲ್ಲಿ ಹೋಗು! ನೀನು ಇಲ್ಲಿಂದ ಹೋದ್ರೆ ಸರಿ.''

ಗುಂಡಾಚಾರ್ಯ: ''ಅಯ್ಯಂಗಾರ್ರೆ! ಏನೋ ಏನೋ ಮಾತನಾಡುತ್ತಿರುವಿರಿ. ನಿನ್ನೆ ರಾತ್ರಿ ನಿದ್ರೆ ಹತ್ತಲಿಲ್ಲವೇನು?''

ಅಯ್ಯಂಗಾರ: ''ನಾಳೆ ಬೆಳಗ್ಗೆ ನೀನು ಹೋದ್ರೆ ಸರಿ! ಇಲ್ಲಾಂದ್ರೆ, ನಾನೇ ಕುತ್ತಿಗೆಗೆ ಕೈಯಿಕ್ಕುತ್ತೇನೆ. ನಾನು ಮಾಡಿದ ಕರಾರ್ ಗೊತ್ತುಂಟಲ್ಲವೇ?''

ಗುಂಡಾಚಾರ್ಯ: ''ಯಾವ ಕರಾರ್? ಕರಾರೋ, ಹುಣಸೇ ಪಟ್ಟಿಯೋ! ನಾಳೆ ತಲೆಗೆ ಎಣ್ಣೆ ಬಳಿದುಕೊಂಡು ಸ್ನಾನ ಮಾಡಬೇಕೆಂದಿರುವೆ...''

ಅಯ್ಯಂಗಾರು ಸಿಟ್ಟನು ತಡೆಯಲಾರದೆ, ''ನೀನು ಹೋಗುವಿಯೋ, ಇಲ್ಲವೋ ನಾಳೆ? ಆ ಅಧಮರಿಗೆ ನಾನು ಹೇಳಿದ್ದೆಲ್ಲಾ ಸರಿಯೆಂದು ತೋರಿಸಲಿಕ್ಕೆ ನಿನ್ನನ್ನು ಒಂದು ಸರಸ ಚೇಷ್ಟೆಗೆ ಇಲ್ಲಿ ಕರೆತಂದೆ. ಇಲ್ಲೇ ಅಂಟಿದೆ ನೀನು.''

ಗುಂಡಾ: ''ಅಂದು ಮಾಡಿದ ಉಪಕಾರವೆಲ್ಲಾ ಮರೆತು ಹೋಯಿತೇ? ಮೊಸಳೆ ಕಚ್ಚಿದಾಗ ನಾನೊಬ್ಬನೇ ನನ್ನ ಪವಿತ್ರ ದರ್ಭೆಯಿಂದ...''

ಅಯ್ಯಂಗಾರ: ''ಸುಮ್ಮನೆ ತೊಂದರೆ ಕೊಡಬೇಡ. ನನ್ನನ್ನು ಮೊಸಳೆ ಹಿಡಿದದ್ದು ಇಲ್ಲ; ಗುಂಡಾಚಾರ್ಯ ಬಿಡಿಸಿದ್ದು ಇಲ್ಲಾ.''

ಗುಂಡಾ: ''ಕೃತಘ್ನತೆಗೆ ಮದ್ದಿಲ್ಲ. ನಾನು ನಿನ್ನ ಜೀವ ಉಳಿಸಿದ್ದನ್ನು ಮರೆತೆಯಾ?'' ಹೀಗೆಂದು ಹೇಳಿ ಗುಂಡಾಚಾರ್ಯರು ಕಣ್ಣೀರು ಒರಸಿದಂತೆ ತನ್ನ ಕೈಬೆರಳುಗಳಿಂದ ಕಣ್ಣನ್ನು ಸವರುತ್ತಿದ್ದರು. ಹೊರಕ್ಕೆ ಯಾರೋ ಮಾತನಾಡಿಸುವಂತೆ ಕೇಳಿಸಿತು.

ಅಯ್ಯಂಗಾರ: ''ಹಾ! 15 ರೂಪ್ಯ ಕೊಡುವೆ. ನೀನು ಸುಮ್ಮನೆ ಹೋಗುವೆಯಾ?''

ಗುಂಡಾಚಾರ್ಯ: ''ಅಯ್ಯಂಗಾರರೇ! ನೀವು ಈಗ ನಿದ್ದೆ ಹೋಗಿ ನಾಳೆ ಮಾತನಾಡಬಹುದು. ನಿದ್ದೆ ಇಲ್ಲದಿದ್ದರೆ ಬುದ್ಧಿ ಹೋಗುತ್ತೆ.''

ಅಯ್ಯಂಗಾರರಿಗೂ ಗುಂಡಾಚಾರ್ಯರಿಗೂ ಜಗಳವಾಗಿತ್ತು ಎಂಬ ಸುದ್ದಿಯು ಊರಲ್ಲಿ ಹಬ್ಬಿತು. ಕುಪ್ಪಣ್ಣನವರೂ ಶ್ಯಾಮರಾಯರು ಇದನ್ನು ಕುರಿತು ಅಯ್ಯಂಗಾರರೊಡನೆ ಕೇಳಬೇಕೆಂದಿದ್ದರು. ಆದರೆ ಇತ್ತಲಾಗೆ ಅಯ್ಯಂಗಾರರು ಕಡ ಕೊಡುವ ಸಂಪ್ರದಾಯವನ್ನು ತೆಗೆದು ಹಾಕಿದ್ದರಿಂದ, ಇವರಿಬ್ಬರಿಗೂ ಅಲ್ಲಿ ಹೋಗಲು ಧೈರ್ಯವಿರಲಿಲ್ಲ. ರವಿವಾರ ದಿನದ ಆಗಬೋಟು ಹತ್ತಿ ಹೋಗದಿದ್ದರೆ, ಗುಂಡಾಚಾರ್ಯರು ಇನ್ನೂ ಮೂರು ನಾಲ್ಕು ದಿನಗಳಲ್ಲಿ ತನ್ನ 'ಹೊಟ್ಲನ್ನು' ಹಿರೀಬಿಡುವರೆಂದು ಹೆದರಿ, ಅಯ್ಯಂಗಾರರು ''ಎಲೋ! ಗುಂಡಾ! ನೀನು ನಾಳೆ ಹೋದ್ರೆ, ಸರಿ! ಇಲ್ಲಾಂದ್ರೆ, ನಾನೇ ಅವರಿಗೆಲ್ಲಾ ಬಾಯ್ಬಿಟ್ಟು ಹೇಳಿ, ನಿನ್ನನ್ನು ಇಲ್ಲಿಂದ ದೊಬ್ಬಿಬಿಡುವೆ'' ಎಂದರು.

ಗುಂಡ: ''ನಾನು ಬರುವ ಚಂದ್ರವಾರ ಹೋಗ್ತೇನೆ ಆಗದೋ? ಕೈಯಲ್ಲಿ ಕಾಸಿಲ್ಲ. ನೀನು ಕೊಡುವ 15 ರೂಪಾಯಿ ದಾರಿಯ ಖರ್ಚಿಗೆ ಸಾಕಾಗದು. ನಿನಗೋಸ್ಕರ ಇದೆಲ್ಲಾ ಸುಳ್ಳು ಹೇಳಿ ನಾನು ಹಾಳಾದೆ.''

ಅಯ್ಯಂಗಾರ: ''ಇಕೋ! ನೀನು ಹೋದ್ರೆ, ಸರಿ'' ಎಂದು ಹೇಳಿ, ಅವನ ಕೈಗೆ 16 ರೂಪ್ಯೆ ಸುರಿದರು.

ಸೋಮವಾರ 10 ಗಂಟೆಗೆ ಗುಂಡಾಚಾರ್ಯರು ಹೋಗುವರೆಂದು ಊರಲ್ಲಿ ಸುದ್ದಿ ಹಬ್ಬಲು, ಕುಪ್ಪಣ್ಣನವರು ಮತ್ತು ಶ್ಯಾಮರಾಯರು ಹೊಟ್ಲಿಗೆ ಬಂದರು. ಗುಂಡಾಚಾರ್ಯರು ತೆರಳುವುದಕ್ಕೆ ಸಿದ್ಧರಿದ್ದರು.

ಗುಂಡಾಚಾರ್ಯರು ಇವರನ್ನೆಲ್ಲಾ ನೋಡುತ್ತಲೇ ''ನಾನು ಎಷ್ಟೋ ಊರು ನೋಡಿದೆ. ಎಷ್ಟೋ ಜನಗಳನ್ನು ನೋಡಿದೆ. ಆದರೆ ಇದಕ್ಕಿಂತ ಒಳ್ಳೇವನ್ನು ನಿಮಗಿಂತಲೂ ಯೋಗ್ಯರನ್ನು ನಾನು ಎಲ್ಲಿಯೂ ನೋಡಿಲ್ಲ.''

ಕುಪ್ಪಣ್ಣನವರು ಗುಂಡಾಚಾರ್ಯರೊಡನೆ ''ನಮ್ಮನ್ನು ಮರೆಯಬಾರದು'' ಎಂದು ಬೇಡಿದರು.

ಗುಂಡಾಚಾರ್ಯ: ''ಈ ವೃದ್ಧಾಪ್ಯದಲ್ಲಿ ನಾನು ದಿಕ್ಕಿಲ್ಲದೆ ಊರೂರು ಸುತ್ತುತ್ತಿರುವಾಗ ನಿಮ್ಮ ನೆನಪು ಎಂದೂ ಆಗದೆ ಇರಲಿಕ್ಕಿಲ್ಲ. ಹೊಟ್ಟೆಗೋಸ್ಕರ ನಾನು ಕಷ್ಟಪಡುವಾಗ ಈ 'ಹೊಟ್ಲನ' ಜ್ಞಾಪಕವು...''

ಶ್ಯಾಮರಾಯ: ''ನೀವು ಮಗಳ ಮನೆಗೆ ಹೊನ್ನೂರಿಗೆ ಹೋಗುವಿರಲ್ಲವೇ?''

ಗುಂಡಾಚಾರ್ಯರು ಮೆಲ್ಲನೆ ನಗುತ್ತ ತಲೆಯಲ್ಲಾಡಿಸಿ ''ನನಗೆ ಮಗಳೂ ಇಲ್ಲ, ಬೀಗನೂ ಇಲ್ಲ, ಈ ಲೋಕದಲ್ಲಿ ನಾನು ಒಬ್ಬನೇ. ನನ್ನಿಂದ ಉಪಕಾರ ಹೊಂದಿದವರು ಹಲವರಿದ್ದಾರೆ'' ಎಂದರು.

ಈ ಮಾತುಗಳನ್ನು ಕೇಳುತ್ತಲೇ ಎಲ್ಲರೂ ಕನಿಕರಗೊಂಡಂತೆ ಅಯ್ಯಂಗಾರರ ಮುಖವನ್ನು ನೋಡಿದರು.

ಕುಪ್ಪಣ್ಣ: ''ನೀವು ಮಗಳ ಮನೆಗೆ ಹೋಗುವಿರೆಂದು ಅಯ್ಯಂಗಾರರೇ ನಮ್ಮೊಡನೆ ಹೇಳಿದ್ದರಲ್ಲಾ!''

ಅಯ್ಯಂಗಾರರು ಸಿಟ್ಟಿನಿಂದ ಎದ್ದುನಿಂತು ವಕ್ರಮುಖವನ್ನು ಮಾಡಿದರು.

ಶ್ಯಾಮರಾಯ: ''ಅಯ್ಯಂಗಾರರು ನಿಮ್ಮನ್ನು ಒತ್ತಾಯ ಮಾಡಿದರೂ ನೀವು ಹೊರಡಲಿಕ್ಕೆ ಹಟ ಹಿಡಿದಿರುವಿರೆಂದು ನಮ್ಮೊಡನೆ ಹೇಳಿದರು.''

ಗುಂಡಾಚಾರ್ಯ: ''ಶುದ್ಧ ಸುಳ್ಳು! ಅವರು ಒಂದು ಮಾತು ಹೇಳಿದ್ದರೆ ನಾನು ಇಲ್ಲೇ ಉಳುಕೊಳ್ಳುತ್ತಿದ್ದೆ. ನಾನು ಇಲ್ಲಿರೋದು ಅವರಿಗೆ ಮನಸ್ಸಿಲ್ಲ. ನನಗೆ ಒಪ್ಪತ್ತು ಕೊಡುವ ಊಟ ಅವರ ಕಣ್ಣಿಗೆ ಹೆಚ್ಚಾಗಿ ತೋರುತ್ತೆ. ನಾನು ಹೊನ್ನೂರಿಗೆ ಹೋಗುವೆನೆಂದು ಅವರೇ ಸುದ್ದಿ ಹುಟ್ಟಿಸಿದರು. ಅವರು ಸುಳ್ಳಾಡೋದು ನನಗೆ ಮನಸ್ಸಿರಲಿಲ್ಲ. ಸಟೆಯಿಂದಲೇ ಸಟೆಯನ್ನು ಬಿಗಿಮಾಡಬೇಕೆಂದು ಹೇಳಿದ್ರು. ಕಡೆಗೆ ನಾನು ಎಲ್ಲಾದರೂ ಹೋಗಿಬಿಡುವೆನೆಂದು ನಿಶ್ಚಯ ಮಾಡಿದೆ. ಆದರೆ ಹೋಗುವಾಗ ನಿಮ್ಮೊಡನೆ ಸುಳ್ಳಾಡಿ ಹೋಗಬೇಕು ಯಾಕೆ?''

ಈ ಮಾತನ್ನು ಕೇಳಿ ಎಲ್ಲರೂ ಸ್ತಬ್ಧರಾದರು.

ಗುಂಡಾಚಾರ್ಯ: ''ನನಗೆ ಮಕ್ಕಳು ಮರಿ ಇಲ್ಲ. ನನ್ನನ್ನು ಹೊರಕ್ಕೆ ಅಟ್ಟಿಬಿಡುವೆನೆಂದು ಅಯ್ಯಂಗಾರರು ಗದರಿಸಿದ್ದರಿಂದ ನಾನು ಹೋಗುವೆ. ಅವರು ಒಂದು ಮಾತು ಹೇಳಿದ್ರೆ ಇಲ್ಲೇ ಉಳುಕೊಳ್ಳುತ್ತಿದ್ದೆ.''

ಗುಂಡಾಚಾರ್ಯರು ಹೀಗೆ ಹೇಳಿ ನಗೆಗಣ್ಣುಗಳಿಂದ ಅಯ್ಯಂಗಾರರನ್ನು ನೋಡುತ್ತಾ, ಹೊರಕ್ಕೆ ನಡೆದುಬಿಟ್ಟರು. ಅವರು ಎಲ್ಲಿ ಹೋದರೋ ಇದುವರೆಗೆ ತಿಳಿಯಲಿಲ್ಲ. ಕುಪ್ಪಣ್ಣನವರೂ ಶ್ಯಾಮರಾಯರೂ ಇವರು ಹೋದ ಮೇಲೆ ಇವರ ಜಾತಕವನ್ನು ಸ್ಫುಟ ಮಾಡಿದ್ದಲ್ಲಿ, ಇವರು ನಲ್ಲೂರು ನೀಲಾಂಬೆಯ ತಮ್ಮನಾಗಿದ್ದನೆಂದು ತಿಳಿದು ಬಂದಿತು. ಈಗಲೂ ಕೆಲವರು ಅಯ್ಯಂಗಾರರ ಜೀವನಚರಿತ್ರೆಯನ್ನು ಅವರ ಇದಿರಿಗೇನೇ ವ್ಯಾಖ್ಯಾನ ಮಾಡುತ್ತಿರುವಾಗ, ಗುಂಡಾಚಾರ್ಯರ ಆಗಮನದ ಕೆಲವು ಸಂಗತಿಗಳನ್ನು ಟಿಪ್ಪಣಿಯಾಗಿ ಕೊಡುವುದುಂಟು.

ಇನ್ಸ್‌ಪೆಕ್ಟರ್ ಗಧಾ

(ಕೆ.ವಿ. ಐಯ್ಯರ್ ಅವರ "ಸಮುದ್ಯತಾ" ಸಂಕಲನದಿಂದ)

ಎರಡನೆಯ ಕಂತು.

(ಇಲ್ಲಿನವರೆಗೆ: ಅವಲಕ್ಷಣವಾಗಿ ಕತ್ತೆಯಂತಿದ್ದ ಕುದುರೆಯೊಂದಕ್ಕೆ, ಶುಕ್ರದೆಶೆ ಒದಗಿ ಅದಕ್ಕೆ ರಾಜೋಪಚಾರ ದೊರಕುವಂತಾಗಿದ್ದರ ಕಥಾನಕವಿದು. ಕಥಾನಾಯಕ (ಉತ್ತಮಪುರುಷ) ಈ ವೃತ್ತಾಂತವನ್ನು ಮಿತ್ರ ವರದಪ್ಪನಿಗೆ ವಿವರವಾಗಿ ಹೇಳುವ ದೃಶ್ಯದಿಂದ ಕಥೆಯ ಪ್ರಾರಂಭ. ರಾಮನಗರದ ಆಸುಪಾಸಿನಲ್ಲಿದ್ದ ಬಂಡೆಗಲ್ಲುಗಳ ನಡುವಣ "ಯಕ್ಷರ ಕೋಟೆ" ಎಂಬಲ್ಲಿನ ಗುಹೆಯೊಂದರಲ್ಲಿ ಕಥಕನ ಚಿಕ್ಕಪ್ಪ ಒಂದು ಕಳ್ಳಭಟ್ಟಿ ಹೂಡಿರುತ್ತಾರೆ. ಈ ದಂಧೆಯಲ್ಲಿ ಕಥಕ ಹಾಗೂ ಅವನ ಅಪ್ಪ ಶಾಮೀಲು. ಯಾರಿಗೂ ಕಾಣದಂತಹ ದುರ್ಗಮವಾದ ಪ್ರದೇಶದಲ್ಲಿದ್ದ ಗುಹೆಯಿಂದ ನಿರಂತರವಾಗಿ ತಯಾರಾಗಿ ವಿತರಣೆಯಾಗುತ್ತಿದ್ದ "ಅಮೃತಾರಿಷ್ಟ" ತಯಾರಕರನ್ನು ಶ್ರೀಮಂತಿಕೆಗೆ ಒಯ್ದಿರುತ್ತದೆ. ಈ ಕಳ್ಳಭಟ್ಟಿಯನ್ನು ಪತ್ತೆ ಹಚ್ಚಲು ಊರಿನ ಪೋಲೀಸ್ ಇನ್ಸ್‌ಪೆಕ್ಟರ್ ಮೀಶೆ ಮಾದಪ್ಪ ಶತಪ್ರಯತ್ನ ನಡೆಸಿರುತ್ತಾನೆ. ಈ ನಡುವೆ ಕಥಕ, ಊರಿಗೆ ಹೊಸದಾಗಿ ಬಂದ ಚೆಂದುಳ್ಳಿ ಹೆಣ್ಣೊಂದನ್ನು ನೋಡಿ ಅವಳಲ್ಲಿ ಮೋಹಗೊಳ್ಳುವ ಸನ್ನಿವೇಶದಿಂದ ಕಥೆಯ ಲವ್ ಇಂಟರೆಸ್ಟ್ ಶುರುವಾಗುತ್ತದೆ. ಮುಂದೆ ಓದಿ.)

ನನ್ನ ಮುಖವನ್ನು ನೋಡಿದಾಕ್ಷಣವೆ ಕಂಡುಕೊಂಡ, ಸಿಟ್ಟಾಗಿದ್ದ ನನ್ನ ಚಿಕ್ಕಪ್ಪ 'ಯಾರೋ ಹೆಣ್ಣು ನನಗೆ ನನಗೆ ಬಲೆ ಬೀಸಿದ್ದಾಳೆ' ಅಂತ. "ಮಲ್ಲ ಸುಳ್ಳು ಯೋಳ್ಬ್ಯಾಡ ನನ್ತಾವ, ಯಾವದೋ ಎಣ್ಣು ಬಲೆಬೀಸ್ಯೆತೆ ಅಂತ ಶೆಂದಾಗಿ ತಿಳಿದುಬರ್‍ತೈತೆ ನಿನ್ನೋಡಿದ್ರೆ. ಇನ್ನು ಶುರು ಆಗ್ತದೆ ನಿನ್ನ ಗಾಶಾರ.

ಸಣೆ ಇಡದಂಗೇನೆ. ಉಡ್ಗಾ, ಎಣ್ಣೊಂದನ್ಬಿಟ್ಟು ಅಲ್ಲಕಚ್ಕೊಂಡಿದ್ಬಿಡು ನನ್ನಂಗೆ - ನಿರಾತಂಕವಾಗಿದ್ಬಿಡಬೌದು. ಇಲ್ಲ .. ಎಣ್ಣಿಗೆ ಮನಸ್ಸು ಕೊಟ್ಟುಬಿಟ್ಯೋ ಆಮೇಲೇನು! ಅಳ್ಳಕ್ಕೆ ಬಿದ್ದಂಗೇ ಉಲಿ. ಆಮೇಲೆ ತನ್ನ ಐದು ಬೆಳ್ಳಿಗೂ ಐದು ದಾರ ಕಟ್ಟಿಕ್ಕೊಂಡು ಆಡ್ಸೇಬಿಡ್ತಾಳೆ ಸೂತ್ರದ ಗೊಂಬೆ ಅಂಗೆ. ನಿಮ್ತಾಯಿ ಇರೋಗಂಟ ನಿಮ್ಮಪ್ಪ ಒಂದು ನೆಮ್ಮದಿ ಕಾಣ. ಈಗ್ತಾನೇ ನಾವಿಬ್ರೂ ಈ ಭಟ್ಟಿ ಸುರು ಮಾಡ್ಕೊಂಡ್ಮೇಲ್ತಾನೆ ನಾಲ್ಕು ಕಾಸು ಕಂಡು ಸುಖವಾಗಿರೋದು ಇಲ್ಲಿಗಂಟ" ಎಂದ ಚಿಕ್ಕಪ್ಪ.

ಇಷ್ಟರಲ್ಲಿ ಕಾಡಿನ ಹಾದಿಯಿಂದ ಯಾರೋ ಗವಿಯೊಳಕ್ಕೆ ಬಂದರು. ಹತ್ತಿರಕ್ಕೆ ಬಂದಾಗ ಇನ್ಯಾರೂ ಅಲ್ಲ-ನನ್ನ ತಂದೆಗಳೆ. ಒಂದು ಮೂಟೆ ಆಲೂಗಡ್ಡೆಯನ್ನ ಹೊತ್ತು ತಂದಿದ್ದವರು ಅದನ್ನು ಭಟ್ಟಿಯ ಹತ್ತಿರ ಇಳಿಸಿ, ಆಯಾಸದಿಂದ ಉಶ್ ಎನ್ನುತ್ತ ಅಲ್ಲೇ ಇಟ್ಟಿದ್ದ ಒಂದು ಪೆಟ್ಟಿಗೆಯ ಮೇಲೆ ಕುಳಿತರು. ನನ್ನ ಚಿಕ್ಕಪ್ಪನ್ನ ಕುರಿತು 'ಈದಿನ ಕೆಟ್ಟ ಸುದ್ದಿಯೊಂದು ನನ್ನ ಕಿವಿಗೆ ಬಿತ್ತು' ಎಂದರು.

ನನ್ನ ಚಿಕ್ಕಪ್ಪ: ನಾನು ಈಗಾಗ್ಲೆ ತಿಳ್ಕೊಂಡ್ಬಿಟ್ಟಿದ್ದೇನೆ. ಇಲ್ಲೆ ನಿಂತಿದ್ದಾನಲ್ಲ ಮಲ್ಲ, ಆಗ್ಲೇ ಹುಡುಗಿಯರ ಹಿಂದ್ಬೀಳೋದನ್ನ ಕಲಿತುಬಿಟ್ಟಿದ್ದಾನೆ... ಹೌದೊ ಅಲ್ಲವೋ ಮಲ್ಲ?

ತಂದೆ: ಅದಲ್ಲಪ್ಪ. ಆ ಇನ್ಸ್‌ಪೆಕ್ಟರ್ ಇದ್ದಾನೆ ನೋಡು .. ಪೊಸಬ, ಅವನು ಒಂದು ಕುದುರೇನ ಕೊಂಡ್ಕೊಂಡಿದ್ದಾನಂತೆ.

ಚಿಕ್ಕಪ್ಪ: ಕೊಂಡ್ಕೊಳ್ಳೀಳು. ಸದ್ಯ ಒಳ್ಳೇದಕ್ಕೇ ಆಯ್ತು. ಅವನು ಸಂಜೆ ಒತ್ತು ಕುದುರೆ

ಚಿಕ್ಕಪ್ಪ: ಕೊಂಡ್ಕೊಳ್ಳೀಳು. ಸದ್ಯ ಒಳ್ಳೇದಕ್ಕೇ ಆಯ್ತು. ಅವನು ಸಂಜೆ ಒತ್ತು ಕುದುರೆ
ಮೇಲತ್ಕೊಂಡು ಮೊಲದ ಶಿಕಾರಿಗೆ ಒಂಟ್ರೆ, ಇಲ್ಲಿ ನಮಗೆ ನೆಮ್ದಿ ಅಲ್ವ?

ತಂದೆ: ಅಯ್ಯೋ! ನಿನಗೆ ಅರ್ಥವಾಗಲಿಲ್ವ? ಶಿಕಾರಿಗಲ್ಲಪ್ಪ ಅವನು ಕುದುರೆ ಕೊಂಡ್ಕೊಂಡಿರೋದು! ಭಟ್ಟಿಗಳ್ನ ಪತ್ತೆ ಮಾಡೋಕೆ. ಇನ್ಸ್‌ಪೆಕ್ಟರುಗಳಿಗೆಲ್ಲ ದೊಡ್ಡಪೊಟ್ಟೆ ಅಲ್ವಾ! ಅದನ್ಹೊತ್ಕೊಂಡು ಅದೆಂಗೆ ತಾನೇ ಬೆಟ್ಟ ಅತ್ತೋಕೆ ಸಾಧ್ಯ? ಕುದುರೆ ಮೇಲ್ಹತ್ಕೊಂಡು ಇನ್ನ ಇಲ್ಲೀಗೆಲ್ಲ ಬಂದ್ಬಿಡ್ತಾನೆ, ಸೋಧಿಸಿಬಿಡ್ತಾನೆ ಬೆಟ್ಟಗಳನೆಲ್ಲ. ಇನ್ನೆಂಗಪ್ಪಾ?

ಚಿಕ್ಕಪ್ಪ: ಅಂಗಾರೆ ಕಸ್ಟಕ್ಕಂತೇ ನಂಬಾಳು. ಇಸ್ಟು ದಿನ ನೆಮ್ದಿಯಾಗಿದ್ವಿ.

ತಂದೆ: ಪತ್ತೆ ಮಾಡೋದ್ರಲ್ಲಿ ಬೋ ಗಟ್ಟಿಗ ಅಂತೆ ಇವನು. ಅದ್ಕೇ ಇವನ್ನ ಇಲ್ಲಿಗೆ ಕಳಿಸ್ಕೊಟ್ರವ್ರೆ, ಸರ್ಕಾರ್ದೋರು. ಇವನೂ ಮಾತು ಕೊಟ್ಟೇ ಬಂದವ್ನಂತೆ ಅವರಿಗೆ. ಸರ್ಕಾರಾನ ಕೇಳಿದನಂತೆ 'ಕುದುರೆ ಕೊಡಿಸ್ಕೊಡಿ' ಅಂತ. ಅವ್ರು ಆ ಪದ್ಧತಿ ಇಲ್ಲಾಂದ್ಬುಟ್ರಂತೆ. ಈಗ ಇವನೇ ಕಾಸ್ಹಾಕಿ ಕೊಂಡ್ಕೊಂಡಿಟ್ಟಿದ್ದಾನಲ್ಲ. ನಿಶ್ಚಯ ಮಾಡಿದಂಗೇ ಆಯ್ತಲ್ವಾ?

ಅಷ್ಟರಲ್ಲಿ ದೊಡ್ಡಯ್ಯನ್ನೂ ಸಣ್ಣಪ್ಪನೂ ಇನ್ನೊಂದು ಮೂಟೆ ಆಲೂಗಡ್ಡೆ ಒಂದು ಮಂಕ್ರಿ ಬೆಲ್ಲ ಹೊತ್ಕೊಂಡು ಗವಿಯೊಳಕ್ಕೆ ಬಂದರು. ದೊಡ್ಡಯ್ಯ ಬರುತ್ತ, ನನ್ನ ತಂದೆಗಳು ಆಡುತ್ತಿದ್ದ ಮಾತುಗಳನ್ನು ಕೇಳಿಸಿಕೊಂಡೆ ಬಂದಿದ್ದ. ದೊಡ್ಡಯ್ಯ "ಇಷ್ಟೆಲ್ಲ ನಮಗೆ ತೊಂದರೆ ಬಂದಿರೋದು ಆ ಕುದುರೆಯಿಂದ ತಾನೆ?" ಅಂದ.

ತಂದೆ: ಸಾಲದೇನು ದೊಡ್ಡಯ್ಯ! ಕುದ್ರೆ ಹತ್ಕೊಂಡು ಇಲ್ಲಿಗೆಲ್ಲಾ ಬಂದ್ಬಿಡ್ತಾನೆ, ಶೋಧನೇಗೆ. ನಮ್ಮ ಭಟ್ಟಿ ಕಂಪು ಒಂದು ಮೈಲಿಗೆ ಬಡೀತೈತೆ. ನಮ್ಮ ಭಟ್ಟಿಗಾನ ಅವನು ಕಂಡಿಡಿದ್ಬಿಟ್ರೆ, ಅವನಿಗೆ ಒಂದು ಮೋಟಾರ್‌ಕಾರನ್ನೆ ಇನಾಂ ಆಗಿ ತೆಗೆದ್ಕೊಟ್ಬಿಡ್ತಾರೆ ಸರ್ಕಾರ್ದೋರು. ಇಲ್ಲಿಂದ ಸೂಪ್ರೆಂಟ್‌ಪದ್ವೀಗೆ ಎಗರಿದ್ರೂ ಎಗರಿದನೆ! ಯಾರ್ಕಂಡೋರು?

ದೊಡ್ಡಯ್ಯ ತನ್ನೊಳಗೆ ತಾನೇ ನಕ್ಕ. 'ಒಂದು ಕುದ್ರೇನ ಕಳ್ಕೊಂಡಾಂದ್ರೆ, ಇನ್ನೊಂದ್ಕುದುರೇನ ಕೊಂಡ್ಕೊಳ್ಳೋ ಛಾತಿ ಇರೋಲ್ಲ ಇವನಿಗೆ' ಅಂದ.

ತಂದೆ: ಕುದ್ರೆ ಕಳ್ಕೊಂಡಾಂದ್ರೆ? ಅದ್ನ ಎಂಗೆ ಕಳ್ಕೊಂತಾನೆ ಅವ್ನು, ದುಡ್ಡು ಕೊಟ್ಟಿದ್ದನ್ನ?

ದೊಡ್ಡಯ್ಯ: ತಿಳೀಲಿಲ್ವಾ! ಕುದ್ರೆ, ಕುದ್ರೇನೆ ಲಪ್ಟಾಯಿಸ್ಬಿಡೋದು. ಎಂಗೆ ಅಂತೀರೋ? ಒಳ್ಳೇ ಕತ್ತಲಾಗಿರೋ ರಾತ್ರೀಲಿ ಓಗೋದು, ಅದನ್ನ ಕಟ್ಟಿರೋ ಲಾಯದ ತಾವ್ಕೆ. ಒಳಗಿರೋ ಕುದ್ರೇಗೆ ಎರಡು ಸಣ್ಣ ಸಕ್ಕರೆ ಅಚ್ಚು ತಿನ್ನಿಸ್ಬಿಟ್ಟು, ಲಗಾಂ ಬಿಚ್ಕೊಳ್ಳೋದು. ಕಮಕ್-ಕಿಮಕ್ ಅನ್ನೋದಿಲ್ಲ ಸಕ್ಕರೆ ತಿಂದ್ಮೇಲೆ ಕುದ್ರೆ. ಆಮೇಲೆ ಒಂದ್ಕೈಲಿ ಸಕ್ರೆ ಅಚ್ಚು ತೋರಸ್ತಾ ಇನ್ನೊಂದ್ಕಯ್ನಿಂದ ಲಗಾಮು ಎಳ್ಕೊಂಡ್ಹೊಂಟೇ ಓಗೋದು. ಇನ್ನೆಲ್ಡು ಅಚ್ಚು ತಿನ್ನಿಸ್ಬಿಟ್ರೆ, ಯಾವ ಲೋಕಕ್ಕಾದ್ರು, ಕರ್ಕೊಂಡೋಗಬೌದು

ನೆಟ್ಗೆ. ಅಂಗೇನೇ ಅದೇ ರಾತ್ರೀನೆ ಪಟ್ನಕ್ಕೆ ಸಾಗಿಸಿಬಿಡೋದು ಅದ್ನ. ಅಲ್ಲಿ ಒಬ್ಬ ಇದಾನೆ ಮದಾರ್‌ಸಾಬಿ ಅಂತ, ಅವನಿಗೆ ಮಾರ್ಬಿಡೋದು, ಎಷ್ಟಕ್ಕೆ ಕೇಳಿದ್ರೆ ಅಷ್ಟಕ್ಕೇ. ಅವ್ನು ಇದು ಯಾರ್ದು? ಎತ್ಲ? ಅಂತ ಕೇಳೋನೇ ಅಲ್ಲ. ಅವ್ನೂ ಸಾಗಿಸೇಬಿಡ್ತಾನೆ, ಬೆಳಗಾಗೋದ್ರೊಳ್ಗೆ ಗಡೀನೇ ದಾಟಿಸಿಬಿಡ್ತಾನೆ.

ವರದಪ್ಪ, ಕೇಳತಾ ಇದೀಯಾ? ಯಾವ ಮನುಷ್ಯನಿಗೇ ಆಗ್ಲಿ ಆತುರದಲ್ಲಿ ಬುದ್ಧಿ ಆಯ ತಪ್ಪುತ್ತೆ. ನ್ಯಾಯ ಅನ್ಯಾಯಗಳ ಪರಿಶೀಲ್ನೆ ತಪ್ಪುತ್ತೆ... ಹಾಗೇ ದೊಡ್ಡಯ್ಯನ ದಡ್ಡ ಸಲಹೆಗೆ ನನ್ನ ತಂದೆಗಳ ಮನಸ್ಸು ಒಪ್ಪಿಯೇಬಿಟ್ಟಿತು. ಕೆಡುವ ಕಾಲ ಬಂದ್ರೆ ಬುದ್ಧಿ ಎಲ್ಲಿಯೋ ಅಡಗಿ ಕುಳಿತುಬಿಡ್ತದೆ ಅಲ್ವಾ?

ನನ್ನ ಚಿಕ್ಕಪ್ಪ ಬಾಯಿಬಿಟ್ಟ, 'ಏನೋ? ಕೆಟ್ಟ ವೇಳೆಗಳೆಲ್ಲಾ ಒಟ್ಟಿಗೆ ಕೂಡಿಬತ್ತಾವೇನೋ! ಅಲ್ಲ... ಈಗ್ಲೇನ ನಮ್ಮ ಮಲ್ಲನಿಗು ಎಣ್ಣಿನ ವಿಶ್ಯಾಕ್ಕೆ ಬುದ್ಧಿ ಕೆಡೋದು? ಯಾವದೋ ಬೀದ್ಯಾಗ್ಹೋಗೊ ಥಳಕು ಪುತ್ಲೀನ ಕಂಡು ಇಂಗೆ ಮಂಕಾಗೋಗ್ಬಿಡೋದಾ ಇವ್ನು!'....

ದೊಡ್ಡಯ್ಯ ಕೇಳಿದ: ''ಆಂ! ಉಡ್ಗೀನಾ!... ಸೊಳ್ಳೆಪರ್ದೆ ಸೀರೆ ಉಟ್ಕೊಂಡು, ಸೊಟ್ಟ ಬೈತಲೆ ತೆಕ್ಕೊಂಡು, ಕೆಂಪು ಜಾಕೆಟ್ ತೊಟ್ಕೊಂಡು, ಉದ್ನೆ ಜಡೆ ಎಳ್ಡು ಎಣ್ಕೊಂಡು, ಒಂದೊಂದಕ್ಕು ಕೆಂಪು ರಿಬ್ಬನ್ ಕಟ್ಕೊಂಡು ಕೆಂಪು ಎಕ್ಕಡಗಳ್ನ ಮೆಟ್ಕೊಂಡು, ಸುಂಟರಗಾಳಿಗೆ ಅಂಗೆ ನಡೀತಿತ್ತಿಲ್ವ ಅದು, ಮಾರ್ಕೆಟ್ನಲ್ಲಿ.... ಅದುತಾನೆ?.... ಅದು ನಿನ್ನೆನೇಪ್ಪ ನಮ್ಮೂರಿಗೆ ಬಂದಿರೋದು.

ನನ್ನ ಕಣ್ಣೂ ಬಾಯೂ ತೆರೆದುಹೋಯ್ತು. ದೊಡ್ಡಯ್ಯನ ಕಣ್ಣಿಗೆ ಎಲ್ಲಿ ಬಿತ್ತು ಈ ಹೆಣ್ಣು?... ನಖಶಿಖಾಂತ ಹೇಗೆ ಬಣ್ಣಿಸಿಬಿಟ್ಟ ಅವಳನ್ನ! ದೊಡ್ಡಯ್ಯನಿಗೆ ತಿಳಿಯದವರ್‍ಯಾರೂ ಇರಲಿಲ್ಲ ನಮ್ಮೂರಲ್ಲಿ. ಅಕಸ್ಮಾತ್ ಯಾರಾದರೂ ಹೊಸಬರು ಊರಿಗೆ ಬಂದರೆ, ಅವರು ಯಾರ ಬಂಧುಗಳು, ಎಲ್ಲಿ ಇಳುಕೊಂಡಿದ್ದಾರೆ? ಬಂದಿರುವ ಕಾರ್ಯವೇನು? ಅನ್ನೋದನ್ನೆಲ್ಲ ಎರಡೇ ಗಂಟೆಯೊಳಗೆ ಪತ್ತೆ ಮಾಡಿಬಿಡುತ್ತಿದ್ದ, ಈ ದೊಡ್ಡಯ್ಯ. ದೊಡ್ಡಯ್ಯ ತನ್ನ ಮಾತನ್ನು ಮುಂದುವರಿಸಿದ: 'ಒಸ್ದಾಗಿ ಬಂದಿದಾನಲ್ಲಪ್ಪ, ಆ ಕುದುರೆ ಕೊಂಡ್ಕೊಂಡೋನು, ಅವನ ವಿಶ್ಯ ತಾನೇಪ್ಪ ಇಷ್ಟೊತ್ತು ಮಾತ್ನಾಡ್ತಿದ್ದಿದ್ದು? ಆ ಪೋಲಿಸ್ ಇನ್ಸ್‌ಪೆಕ್ಟ್ರು, ಅಗೋ ಅವನ್ಮಗ್ಳೇ ಇವ್ಳು! ತಾಯಿ ಇಲ್ಲದ ಮಗಾನ ಬಲುಶೆಂದಾಗಿ ಸಾಕಿದ್ದಾನೆ. ಇವ್ನು ಪಟ್ಣಣದಲ್ಲಿದ್ದಾಗ - ಈ ಉಡ್ಗಿ ಅಲ್ಲಿ ಇಸ್ಕೂಲಿಗೆ ಓಗ್ತಾ ಇದ್ದಳಂತೆ. ತಂದೆ ಇಲ್ಲಿ ಬಂದ್ಬಿಟ್ಮೇಲೆ ಉಡ್ಗೀನ ಅಲ್ಬಿಟ್ಟಿದ್ರೆ ಒಳ್ಳೇದಲ್ಲಾಂತ ಇಲ್ಲಿಗೆ ಕರಿಸ್ಕೊಂಡ್ಬಿಟ್ನಂತೆ. ಅವ್ಳು ಈವೊತ್ತು ಬೆಳಿಗ್ಗೆ ಮಾರ್ಕೆಟ್ಗೆ ತರಕಾರಿ ಕೊಂಡ್ಕೊಣಾಕೆ ಬಂದಿದ್ದಾಗ್ಲೆ ಬಿದ್ದಿರ್ಬೇಕು ನಮ್ಮ ಚಿಕ್ಕೋರ ಕಣ್ಗೆ. ನಾನೂ ಆಗ ಮಾರ್ಕೆಟ್ನಲ್ಲೇ ಇದ್ದೆ, ಬೆಲ್ಲ ಯಾಪಾರ ಮಾಡ್ತಾ. ಆಮೇಲೆ ಅಲ್ಲೇ ನಿಂತಿದ್ದ ಕಾನ್ಸ್‌ಟೇಬಲನ್ನ... ಅವನು ನನಗೆ ಗುರುತು ಇಚಾರಿಸ್ದೆ, 'ಯಾರ್‍ಮಗಾಪ್ಪ ಅದೂ' ಅಂತ. ಅವನೇಳ್ದ ಎಲ್ಲಾ ಸಂಗತೀನೂ. ಉಡ್ಗಿ ಎಸ್ರೂ, ಯೋಳ್ದಾಪ್ಪ... ಬೋಶೆಂದಾಗಿತ್ತು... ಯಾಕೋ ಗ್ನ್ಯಾಪ್ಕ ಬರ್‍ಲಿಲ್ವೆ! ಆಂ!... ಆಂ!... ಗ್ಯಪ್ತೀಗೆ ಬಂತು.... 'ಉಷಾ... ಉಷಾ'ಂತ.

ಈ ದೊಡ್ಡಯ್ಯ ತನಗೆ ಬೇಡವಾದ್ದು ಇತರರಿಗೆ ಸಂಬಂಧಪಟ್ಟದ್ದು ವಿಷಯಗಳನ್ನ ಇಷ್ಟು ವೇಗ ಹೇಗೆ ಸಂಪಾದಿಸಿಬಿಡುತ್ತಾನೆ ಅಂತ ನನಗೇನೂ ಆಶ್ಚರ್ಯವಾಗಲಿಲ್ಲ. ಅವನದು ಅದೊಂದು ಹವ್ಯಾಸ.... ಆದರೆ ಅವನು ''ಉಷಾ ಮೀಶೆಮಾದಪ್ಪನ ಮಗಳು'' ಎಂದದ್ದು ನನ್ನ ಹೊಟ್ಟೇನ ಉರುಸಿಯೇ ಬಿಟ್ಟಿತು ವರದಪ್ಪ. ಅದಕ್ಕೆ ಬದಲಾಗಿ ಅವನು 'ಆ ಉಷಾ ಬಾನಾಸುರನ ಮಗಳು' ಅಂದಿದ್ದರೂ, ಒಂದು ಕೈ ಬಾಣಾಸುರನ ಜೊತೆ ಯುದ್ಧ ಮಾಡಿಯಾದರು ನೋಡಿಬಿಡುತ್ತಿದ್ದೆ, ಸಾಯಲಿ... ಬದುಕಲಿ....

ದೊಡ್ಡಯ್ಯ ಅಷ್ಟು ಹೇಳಿ ಸುಮ್ಮನಾಗಲಿಲ್ಲ; ನನ್ನ ನೋಡಿ ''ನಿನ್ನ ಬೇಟೆ ಅದು ಮಲ್ಲಣ್ಣ, ನಿನ್ನ ಕೈತಪ್ಪಿಸಿಕೊಂಡ್ಹೋಗಿ ಇನ್ನೆಲ್ಲಾದ್ರೂ ಬಿದ್ಬಿಟ್ಟೀತು... ನಿನಗೆ ಸರಿಯಾದ ಜೋಡಿ ಅದು... ಏನಾರ ಮಾಡಿ... ಎಂಗಾರ ಮಾಡಿ ಬೆಳಸ್ಕೋ ಸ್ನೇಅನ. ಬೇಟೇನ ಗಾಭರಿಪಡಿಸಿಬಿಡ್ಬೇಡ, ಆತುರದಲ್ಲಿ... ಜೋಕೆ. ಇಲ್ನೋಡಪ್ಪ... ಇನ್ನೊಂದ್ವಾರದೊಳಗೆ.... ನೀನ್ಗಾನಾ... ಅವಳ ಸ್ನೇಅ ಬೆಳೆಸ್ಕೊಂಡು, ಅವ್ಳಕಡೆ ಇಂದ ಆ ಕುದ್ರೆ ಕಟ್ಟಿರೋ ಲಾಯದ ಬಿಗದ ಕೈಯನ್ನ ಸಂಪಾದಿಸ್ದೆ ಹೋದ್ರೆ... ದೇವ್ರು ನಿನ್ನ ಗಂಡ್ಸಾಗಿ ಉಟ್ಟಿಸಿದ್ದೆ ತೆಪ್ಪು... ಓಗು'' ಎಂದುಬಿಟ್ಟು, ನನ್ನ ತಂದೆ, ಚಿಕ್ಕಪ್ಪ ಇವರನ್ನು ಕುರಿತು ''ಇಗೋ ನೋಡ್ರಿ, ಯಜಮಾನ್ರೆ. ಈ ಕೆಲ್ಸ ಆಗ್ಬೇಕಾದ್ರೆ ಮಲ್ಲಣ್ಣನ ಕೈಯಿಂದ್ಲೇ ಆಗಬೇಕು. ಕುದ್ರೇನ ತಂದು ನನ್ನ ಕೈಗೆ ಒಪ್ಪಿಸಿಬಿಡ್ಲಿ, ನಾನದನ್ನ ಮಟ್ಟಮಾಯ ಮಾಡಿಬಿಡ್ತೀನಿ'' ಎಂದು ಹೇಳಿ ಮುಗಿಸಿದ.

ಚಿಕ್ಕಪ್ಪ ನನ್ನ ಹೆದರಿಸಿದ: ''ಇಗೊ ಮಲ್ಲ, ಅವನ ದಡ್ಡ ಮಾತುಗಳ್ನ ಕಿವಿಮ್ಯಾಗೆ ಹಾಕ್ಕೊಬೇಡ'' ಅಂತಾ ದೊಡ್ಡಯ್ಯನ ಕಡೆ ತಿರುಗಿನೋಡಿ ''ದೊಡ್ಡಯ್ಯ, ನೀನು ಇಂಗೆ ಚಿತಾವ್ಣೆ ಮಾಡಬಾರ್ದು ಮಲ್ಲಣ್ಣಂಗೆ... ಇದರಿಂದ ಕೆಡುಕಾಯ್ತದೇ ವಿನಾ ಒಳ್ಳೇದೆಂದಿಗೂ ಆಗ್ದು'' ಅಂತ ದೊಡ್ಡಯ್ಯನ್ನ ಗದರಿಸಿಕೊಂಡ.

ನನ್ನ ತಂದೆಗಳು ಇಷ್ಟು ಹೊತ್ತೂ ದೀರ್ಘ ಆಲೋಚನೆಯಲ್ಲಿದ್ದವರು, ಥಟ್ಟನೆ ಎಚ್ಚೆತ್ತು ''ಸ್ವಲ್ಪ ಇರು ತಮ್ಮಯ್ಯ. ಕುದುರೇನ ಸಂಪಾದಿಸೋಕೆ ಬೇರೆ ಮಾರ್ಗ ಇಲ್ಲದಿರುವಾಗ... ಹುಡುಗ ಹುಷಾರಗಿದ್ರೆ ಕೆಲ್ಸಾನ ನಡಸಿಕೊಡಬೌದು. ದೊಡ್ಡಯ್ಯನ ಮಾತು ಅಂತಾದ್ದೇನೂ ತೆಗೆದಾಕೋ ಅಂಗಿಲ್ಲ'' ಎಂದರು.

ಚಿಕ್ಕಪ್ಪನಿಗೆ ಸಿಟ್ಟೇ ಬಂತು. 'ಜೋಕೆ... ನಿರ್ನಾಮವಾದಾತು. ನಮ್ಮ ಭಟ್ಟಿ. ಅಣ್ಣಯ್ಯ... ನೀ ಕಾಣ್ಯಾ! ಈ ಪರ್ಪಂಚ ಉಟ್ಟಿದಮ್ಯಾಕೆ ಇದ್ವರ್ಗೂ ಎಂಗೊಸ್ಬುಳು ನಡುವೆ ಇದ್ದ ಕೆಲಸ ಯಾವ್ದು ಸಲಿಸಾಗಿ ನಡದೈತೆ?'' ಎಂದು ಕೇಳಿದ. ನನ್ನ ತಂದೆಗಳು ತಮ್ಮನ ಮಾತಿಗೆ ''ಅಯ್ ತಮ್ಮಯ್ಯ; ನೀನು ಸುದ್ದ ಅಂಜುಬುರಕ. ಧೈರ್ಯ ಸಾಕಷ್ಟು ಇಲ್ದಿದ್ರೆ ಯಾವ ಕೆಲ್ಸತಾನೇ ಜೈಸೋದಕ್ಕಯ್ತದೆ? ಈಗಾನ ನಾವ್ ಸುಮ್ನೆ ಕುಂತುಬಿಟ್ಟೆವೋ, ಇನ್ನ ನಾಕೇ ದಿನಗಳೊಳ್ಗೆ ಮುಗಿದೋಯ್ತದೆ, ಈ ಭಟ್ಟಿಕತೆ... ಇಲ್ಲ ಇದಕ್ಕಿಂತ ಬೆಹತ್ತರಿ ಯೋಚ್ನೆ ನಿಮಗೆ ತಿಳಿದಿದ್ರೆ ಯೋಳು'' ಎಂದು ಹೇಳಿ, ತರುವಾಯ ನನ್ನ ಕಡೆ ನೋಡಿ ಅಂದರು: ''ಮಲ್ಲಾ, ಇನ್ನು ನೀನು ಹುಡುಗ್ನಲ್ಲ... ಮೀಶೆ ಒತ್ತ ಗಂಡ್ಸು. ಸಾಧಿಸು ಕೆಲ್ಸಾನ. ನಿನ್ನ ಭಟ್ಟೀನ ಎಂರ ಉಳೀಸ್ಕೊ... ಸಂಪಾದಿಸ್ಕೊ ನಿನ್ಜೋಡಿನು.... ನಾನ್ಬೇಡಾನ್ನೊದಿಲ್ಲ.

ಶಹಬ್ಬಾಸ್ ಅನ್ನಿಸ್ಕೋಬೇಕು ನಾಲ್ಕು ಜನತ್ತಾವ.... ಆದ್ರೆ ಒಂದ್ಮಾತು ಮರೀಬ್ಯಾಡ... ಈ ಕಾರ್‍ಯದಾಗ ಉಡ್ಗೀನೆ ಮುಖ್ಯ ಅಲ್ಲ; ... ಕುದ್ರೆ ಮುಖ್ಯ ನೋಡು. ಕುದ್ರೇನ ತಂದೊಪ್ಪಿಸಿಬಿಡು ದೊಡ್ಡಯ್ಯನಿಗೆ.... ಏನೇನೂ ಗುಮಾನಿನೇ ಇಲ್ದಂಗೆ... ಯುಕ್ತಿ ಇಲ್ದಿದ್ರೆ, ಛಾತಿ ಇಲ್ದಿದ್ರೆ ಜೈಲಿಗೇ ಬಿದ್ದೀಯೇ... ಜೋಕೆ.''


ದೊಡ್ಡಯ್ಯ ಅಂದ: 'ಅದು ಮಾತು. ಯಜಮಾನ್ರ ಗುಂಡ್ಗೇನೇ ಗುಂಡ್ಗೆ. ಭಟ್ಟ ನಾಕು ಜನರ ಅನ್ನಾಪ್ಪಾ, ಅದ್ನ ಎಂಗಾರ ಬಚಾಯಿಸ್ಬೇಕು ಈಗ.'

ವರದಪ್ಪ, ಕೇಳ್ತಿದ್ದಿಯಾ ಕತೇನ? ಒಪ್ಪಿಕೊಂಡುಬಿಟ್ಟೆ ನಾನೂನು. ಒಪ್ಕೊಳ್ಳೋಹಾಗೆ ಮಾಡಿದ್ದು ನನ್ನ.... ಭಟ್ಟೇನೂ ಅಲ್ಲ.... ಕುದುರೇನು ಅಲ್ಲ... ಹೆಣ್ಣಪ್ಪಾ... ಬಾಣಾನ ನೆಟ್ಟುಬಿಟ್ಟೆ ಹೋದ್ಳಲ್ಲ, ಆ ಹೆಣ್ಣಪ್ಪಾ!

ಒಪ್ಪಿಕೊಂಡು ಇನ್ನೂ ಎರಡು ದಿನ ಕೂಡ ಆಗಲಿಲ್ಲ. ಮೀಶೆಮಾದಪ್ಪ ನಾಲ್ಕು ಜನ ಪ್ಯಾದೆಗಳನ್ನೂ ಜೊತೆಗೆ ಇಟ್ಟುಕೊಂಡು, ಕುದುರೆ ಹತ್ತಿಕೊಂಡು ಚದರಗಜ ಚದರಗಜ ನೆಲಾನೂ ಶೋಧಿಸ್ತ ನಮ್ಮ ಯಕ್ಷರಕೋಟೆಯ ಬಳಿಗೆ ಬಂದುಬಿಟ್ಟಿದ್ದ. ಈವೊತ್ತೋ ನಾಳೇನೋ ನಮ್ಮ ಭಟ್ಟ ಬಳಿಗೂ ಬಂದೇ ಬಿಡುತ್ತಿದ್ದ.

ನನ್ನ ತಲೆ ತುಂಬ ಯೋಚನೆಯೇ... ರಾತ್ರೆ ನಿದ್ದೆ ಇಲ್ಲ, ಹಗಲು ನೆಮ್ಮದಿ ಇಲ್ಲ.

(ಮೂರನೆಯ ಕಂತು ಮುಂದಿನ ಸಂಚಿಕೆಯಲ್ಲಿ)



ಎಲ್ಲಾ ಹಲಸಿನ ಹಣ್ಣಿಗಾಗಿ

– ಬಿ.ಹೆಚ್. ಕುಲಕರ್ಣಿ

ಹಲವರಿಗೆ ಚಟ. ಯಾರಾದರೂ ಊರಿಗೆ ಹೋಗುತ್ತೇನೆ ಎಂದಾಕ್ಷಣ ಅವರಿಗೆ ಒಂದು ಕೆಲಸವನ್ನು ಹೇಳುವುದು. ಈ ಚಟವು ಅವರಿಗೆ ಹುಟ್ಟಿದಾರಭ್ಯದಿಂದ ಬಂದಿರಬಹುದು. ಇಲ್ಲವೆ ಇನ್ನೊಬ್ಬರಿಂದ ಬಳುವಳಿಯಾಗಿ ಪಡೆದಿದ್ದಿರಬಹುದು. ಅಥವಾ ಸ್ವಂತ ಅನುಭವದಿಂದ ಬಂದಿರಬಹುದು. ಅದೇನೇ ಆದರೂ ಕೆಲಸ ಹೇಳುವವರ ಪರಿಣತಿಯು ಅಗಾಧ! ಎದುರಿಗೆ ಇರುವವನು ಯಾವ ಊರಿಗೆ ಹೋಗುವೆನೆಂದರೂ ಆ ಊರಲ್ಲಿ ಸಿಗುವ ಉತ್ತಮ ವಸ್ತು, ಅದು ಸಿಗುವ ಸ್ಥಳ, ಅದರ ಬೆಲೆ, ಅಲ್ಲಿಯ ಇಲ್ಲಿಯ ಬೆಲೆಗಳಲ್ಲಿಯ ವ್ಯತ್ಯಾಸ, ಇವುಗಳ ಬಗ್ಗೆ ಕರಾರುವಾಕ್ಕಾಗಿ ಯಾರೇ ಇರಲಿ, ಇವರಿಗೆ ಎಷ್ಟೇ ಹತ್ತಿರದವರಿರಲಿ, ಇಲ್ಲವೆ ದೂರದವರಿರಲಿ, ಎಂಥದೇ ಪ್ರಸಂಗವಿರಲಿ, ತಮ್ಮ ಕೆಲಸವನ್ನು ನಿಖರವಾಗಿ ಹೇಳುವಲ್ಲಿ ನಿರ್ಭಿಡೆಯನ್ನು ಹೊಂದಿದವರು.

ನಾನು ಆವಾಗ ಇದ್ದದ್ದು ಗುಲಬರ್ಗಾ ಜಿಲ್ಲೆಯಲ್ಲಿ. ಕಚೇರಿಯಲ್ಲಿ ಕೆಲಸ ಮಾಡುತ್ತಿರುವಾಗ ಒಂದು ಟೆಲಿಗ್ರಾಂ ಬಂತು. ನನ್ನ ಆತ್ಮೀಯ ಸುರೇಶನಿಗೆ ಆಪರೇಶನ್ ಆಗಿರುವ ಸುದ್ದಿಯನ್ನು ಹೊತ್ತು ತಂದ ಟೆಲಿಗ್ರಾಂ ಅದು. ನೋಡಿದ ತಕ್ಷಣ ದಿಙ್ಮೂಢನಾದೆ.

ಮನಸ್ಸು ತಡೆಯಲಿಲ್ಲ. ಇಂದೇ ಹೊರಡಬೇಕೆಂಬ ನಿರ್ಧಾರದಿಂದ ರಜೆಯ ಚೀಟಿಯನ್ನು ಕೊಟ್ಟು ಕಳಿಸಿದ ಮೇಲೆ ಸಾಹೇಬನಿಂದ ಬುಲಾವು ಬಂತು.

''ಏನ್ರೀ, ಯಾರಿಗೆ ಆರಾಮವಿಲ್ಲ?''

''ನನ್ನ ಗೆಳೆಯನಿಗೆ ಸಾರ್''

''ಅದಕ್ಕs ಹುಬ್ಬಳ್ಳಿಗೊಂಟಿರೇನು?''

''ಹೌದು ಸಾರ್ ಎರಡು ದಿನ ರಜೆ ಬೇಕಾಗಿತ್ತು''

''ಎರಡು ದಿನ ಯಾಕ? ಮೂರು ದಿನಾ ತೊಗೋರಿ''

''ಬ್ಯಾಡ ಸಾರ್ ಎರಡೇ ದಿನಾ ಸಾಕು''

''ನಿಮ್ಮ ಮರ್ಜಿ. ಅಂದ್ಹಾಂಗ, ಹುಬ್ಬಳ್ಳಿ ತನಕಾ ಹೋದ ಮ್ಯಾಲ ಸ್ವಲ್ಪ ಧಾರವಾಡಕ್ಕೂ ಹೋಗಿ ಬರ್ರಿ. ಅಲ್ಲೇ ಫೇಡೆ ಬಾಳ ಛೋಲೋ ಸಿಗ್ತಾವ. ಒಂದು ಕಿಲೋ ತೊಗೊಂಡ ಬರ್ರಿ''

ಇಂಥಾ ಸಮಯದಲ್ಲಿ ಫೇಡೆ ತಿನ್ನಬೇಕೆನ್ನುವ ಇವರಿಗೆ ನಾನು ಏನು ಹೇಳಬೇಕೆಂಬುದss ತಿಳೀಲಿಲ್ಲ. ಹೆಣ ಸುಡುವ ಬೆಂಕಿಯಲ್ಲಿ ಅರಳು ಹುರಿದು ತಿನ್ನುವ ಜನಾ ನೀವು ಎಂದು ಅನ್ನಬೇಕೆನಿಸಿತು. ಆದರೂ ಸಾಹೇಬರು ...

''ಸರಿ ಸಾರ್'' ಎಂದೆ ಅಷ್ಟೇ.

''ಹಾಂ, ಅಂಥ್ಹಾಂಗ ಹುಬ್ಬಳ್ಳಿಯೊಳಗ ನಮ್ಮನಿಯವರ ಅಣ್ಣನ ಮಗ ಸುರಮಾಂಡೇಕರ್ ಅಂತ ಇರತಾನ. ಅವ್ರಿಗೆ ಒಂದು ಚೀಟಿ ಕೊಡ್ರಿ ಏನು. ಹಾಂಗS ಅವರೊಂದು ಸಾಮಾನ ಕೊಡ್ತಾರ ತೊಗೊಂಡ ಬರ್ರಿSS''.

ನನಗೆ ವಿಚಿತ್ರ ಅನಿಸಿತು. ನಾ ಸುರೇಶನ್ನ ನೋಡಲಿಕ್ಕೆ ಹೊರಟೇನೋ ಅಥವಾ ಬರೇ ಇಂಥಾ ಕೆಲ್ಸ ಮಾಡಲಿಕ್ಕೆ ಹೊಂಟೀನೋ ಎಂದು. ಕೂಡಲೇ ಇಲ್ಲದ ಉಪಕಾರ ಪ್ರಜ್ಞೆ ಜಾಗ್ರತವಾಯಿತು. ನಾ ಏನು ಸಾಮಾನ ಹೊತಗೊಂಡು ಬರೂದಿಲ್ಲ. ಬರುವಾಗ ಬಸ್ಸಿನಾಗS ತಂದ್ರ ಆತು ಅಂತ ಅನಿಸ್ತು.

ಮೌನವಾಗಿ ಹೊರಬಂದೆ. ಹಿಂದಿನಿಂದಲೇ ಚೀಟಿ ನನ್ನನ್ನು ಹಿಂಬಾಲಿಸಿ ಕಿಸೆಯನ್ನು ಸೇರಿತ್ತು.

ಅದೃಷ್ಟವಶಾತ್ ಸುರೇಶನು ಆರೋಗ್ಯವಂತನಾಗಿದ್ದ. ನನಗೆ ಸಂತೋಷವಾಯಿತು.

ಉಭಯ ಕುಶಲೋಪರಿಯ ನಂತರ ಗೆಲುವಿನಿಂದ ಆಸ್ಪತ್ರೆಯಿಂದ ಹೊರಬಿದ್ದೆ.

ಈಗ ಸುರಮಾಂಡೇಕರ್ ಅವರ ಮನೆಯ ಅನ್ವೇಷಣೆಗೆಂದು ಹೊರಟೆ. ಹುಡುಕುವ ಕ್ರಿಯೆಯ ಅಂತಿಮ ಚರಣ ಹತ್ತಿರ ಬಂದ ಅನುಭವವು ಹುಡುಕಾಟ ಪ್ರಾರಂಭವಾದ ಸುಮಾರು ಎರಡು ಘಂಟೆಗಳ ನಂತರ ಬಂದಾಗ, ಈ ಹುಡುಕಾಟದ ದುರ್ಘರತೆಯು ಎಷ್ಟು ಎಂದು ಅರಿವಾಗತೊಡಗಿತ್ತು. ಸುರಮಾಂಡೇಕರ್ ಇರುವ ಗಲ್ಲಿಯ ಶೋಧವಾಗಿತ್ತು.

''ಇಲ್ಲಿ ಸುರಮಾಂಡೇಕರ್ ಅವರ ಮನಿ ಎಲ್ಲಿ?''

''ಯಾವ ಸುರಮಾಂಡೇಕರ್? ಐದಾರು ಸುರಮಾಂಡೇಕರಗೋಳ ಇದ್ದಾರ ಈ ಗಲ್ಲಿ ಒಳಗ''

ನನಗೆ ಗಲಿಬಿಲಿಯಾಯ್ತು. ಹೇಳುವಾಗೇನೋ ಸುರಮಾಂಡೇಕರ್ ಮನಿಗೆ ಹೋಗಿ ಬರ್ತೀನಿ ಅಂತ ಹೇಳಿದ್ದೆ. ಆದರ ಇಲ್ಲಿ ಸುರಮಾಂಡೇಕರ್ ಅನ್ನುವ ಹೆಸರು ಸಹಿತ ಕುಲಕರ್ಣಿ, ದೇಶಪಾಂಡೆ, ದೇಸಾಯಿಯವರ್ಹಾಂಗ ಸಾರ್ವತ್ರಿಕ ಇರ್ತದ ಅಂತ ಅನಿಸಿದ್ದಿಲ್ಲ. ಹೆಸರ ಇಟ್ಟಕೊಂಡ್ರು ಅದ್ಹೆಂಥಾ ಕಠಿಣ ಹೆಸರ ಇಟ್ಟಗೋತಾರ್ರಿ ಈ ಮಂದಿ. ಬ್ಯಾರೆ ಸರಳ ಹೆಸರS ಸಿಗೋದೂಲ್ಲೊ ಇವರಿಗೆ. ಇವರೇ ಇಲ್ಲೆ ಸುರಮಾಂಡೇಕರ ಅಂತ ಇವನ ಹೆಸರ ಉಚ್ಚರಿಸುವಾಗನS ನಾಲಿಗೆ ಚಪಾತಿಯಾಗುವಾಗ, ಇಂಥಾ ಹೆಸರು ನಾನು ಹುಡುಕುವ ವ್ಯಕ್ತಿಯನ್ನು ಬಿಟ್ಟು ಬ್ಯಾರೆಯವರ್‍ಯಾರದೂ ಇರುವದು ಅಶಕ್ಯ ಅಂತ ನನ್ನ ಅಂತರಾತ್ಮ ಮೊದಲು ನನಗೆ ಬಹುತೇಕವಾಗಿ ಹೇಳಿರಬಹುದು. ಅದಕ್ಕೇ ನಾನು ಇತರ ವಿವರಗಳನ್ನು ಆವಾಗ ಕೇಳಿರಲಿಕ್ಕಿಲ್ಲ ಅಂತ ಈಗ ಅನಿಸತೊಡಗಿತು.

''ಯಾವುದೋ ಒಂದು ಸುರಮಾಂಡೇಕರ ಮನಿ ತೋರಿಸ್ರಿ''

''ಹಾಂಗದ್ರ, ನಿಮ್ಮ ಎದುರಿಗಿನ ಮನೀನ ಒಬ್ಬ ಸುರಮಾಂಡೇಕರ ಅವರದು''

ಇಷ್ಟರಾಗ ಅದೇ ಮನಿಯೊಳಗಿನಿಂದ ನೀಳಕಾಯದ, ವಯಸ್ಸು ಇಳಿದ ಸಭ್ಯ ಗೃಹಸ್ಥನಂತಿರುವ ವ್ಯಕ್ತಿ ಹೊರಗೆ ಬರುತ್ತಿರುವದನ್ನು ಕಂಡು

''ನಮಸ್ಕಾರ್ರಿ. ನನಗೆ ಸುರಮಾಂಡೇಕರ ಅವರ ಮನಿ ಬೇಕಾಗಿತ್ತ''

ಮತ್ತೆ ಅದೇ ಪ್ರಶ್ನೆ ''ಯಾವ ಸುರಮಾಂಡೇಕರ್?'' ''ಅದೇ ಅವರ ಬೀಗ್ರು, ಗುಲಬರ್ಗಾದಾಗ ಸಾಹೇಬ್ರಿದ್ದಾರ, ಎತ್ತರಾಗಿ ಬಡಕ ಇದ್ದಾರಲ್ಲ'' ಅಂತ ಏನೇನೋ ಹೇಳಿದೆ.

''ಇಷ್ಟs ಹೇಳಿದ್ರ ಹ್ಯಾಂಗ್ರೀ?''

ಇನ್ನಷ್ಟು ಏನೋ ಹೇಳಬೇಕಂತ ''ಅಂಥ್ಹಾಂಗ ಅವರು ಧಾರವಾಡದಿಂದ ನನಗೆ ಫೇಡೆ ತೊಗೊಂಡ ಬಾ ಅಂತ ಹೇಳ್ಯಾರ'' ಎಂದು ಸಂಬಂಧವಿಲ್ಲದ ಏನೇನನ್ನೋ ಬಡಬಡಿಸಿದೆ.

''ಹಾಂ, ಹಾಂಗಾದರ ಅಂವಾ ನಮ್ಮ ಪಾಪ್ಯಾನs''

''ಪಾಪ್ಯಾ ಅಲ್ರಿ, ಅವರು ನಮ್ಮ ಸಾಹೇಬ್ರು!''

''ಅದೇ ಅಲ್ಲಿ ನಿಮ್ಮ ಸಾಹೇಬ್ರs, ಇಲ್ಲಿ ನಮ್ಮ ಪಾಪ್ಯಾ. ಬರ್ರಿ ಬರ್ರಿ ಬರೋಬ್ಬರ ಮನೀಗೆ ಬಂದಿರಿ. ಹೂಂ ಏನ ಹೇಳ್ಯಾರ''

''ಏನಿಲ್ಲಾ, ಈ ಚೀಟಿ ನಿಮಗೆ ಕೊಡಲಿಕ್ಕೆ ಹೇಳ್ಯಾರ ಮತ್ತು ನೀವೇನೋ ಸಾಮಾನು ಕೊಡತೀರಂತ. ಅದನ್ನ ನನಗೆ ತರಲಿಕ್ಕೆ ಹೇಳ್ಯಾರ''

ಕೇಳಿ ಮೌನವಾಗಿ ಚೀಟಿ ಓದುವಲ್ಲಿ ತಲ್ಲೀನನಾದ ಸುರಮಾಂಡೇಕರ ಅನ್ನುವ ವ್ಯಕ್ತಿ ನಡುನಡುವೆ ಹುಬ್ಬು ಮೇಲೇರಿ ಕೆಳಕ್ಕಿಳಿಯುತ್ತಿದ್ದವು. ನಡುವೆ ನಕ್ಕ, ಮುಖವನ್ನು ಮೇಲಕ್ಕೆತ್ತಿ ನನ್ನ ಕಡೆಗೆ ನೋಡುತ್ತ ಚೀಟಿಯನ್ನು ಮಡಚುವಲ್ಲಿ ತಲ್ಲೀನನಾದ. ನನ್ನನ್ನು ನೋಡುವ ಆ ಮನಷ್ಯನ ನೋಟ ಕರುಣೆಯಿಂದ ತುಂಬಿರುವಂತೆ ಭಾಸವಾಯ್ತು.

''ಹೂಂ, ಹ್ಯಾಂಗೂ ನೀವು ರಾತ್ರಿ ಒಂಬತ್ತರ ಬಸ್ಸಿಗೆ ಗುಲಬರ್ಗಾಕ್ಕೆ ಹೋಗಾವ್ರು, ಎಂಟ ಎಂಟೂವರಿಗೆ ಮನಿಗೆ ಬರ್ರಿ, ಸಾಮಾನ ವಯ್ಯಾಕ್ರೆಂತ''

ಧಾರವಾಡದ ಫೇಡೆ ತೊಗೊಂಡು ಹಾಂಗ ಬಸ್ ಹತ್ತಿ ಗುಲಬರ್ಗಾಕ್ಕ ಹೋಗಬೇಕಾದಂವ್ಗ ತಿರುಗಿ ಹುಬ್ಬಳ್ಳಿಗೆ ಬರುವ ಕಲ್ಪನೆ ಮುದ ನೀಡುವದೇನಾಗಿರಲಿಲ್ಲ. ಅಷ್ಟೇ ಅಲ್ಲ, ಇದರಿಂದಾಗುವ ಅನಾನುಕೂಲತೆಯ ಅರಿವಾಗತೊಡಗಿತು. ಆದರೂ ಮುಂದೆ ಕುಳಿತ ವಯಸ್ಕ ಸಭ್ಯಗೃಹಸ್ಥ ಅಧಿಕಾರಯುತವಾಗಿ ಹೇಳಿದಾಗ, ನನ್ನ ಅನಾನುಕೂಲತೆಗಳನ್ನು ಹೇಳಲು ಬಾಯಿ ಏಳಲಿಲ್ಲ.

'ಹೂಂ' ಎಂದಿಷ್ಟೆ ಹೇಳಿ ಹೊರಬಿದ್ದೆ.

ಮನಸ್ಸಿನ ಮಂಥನ ಪ್ರಾರಂಭವಾಗಿತ್ತು. ನನ್ನ ದೈನ್ಯತೆಯನ್ನು ಕಂಡು ನಾನೇ ಮರುಕಪಡುತ್ತಿದ್ದೇನೇನೋ ಎಂದೆನಿಸಿತು. ಇಂಥಾ ಎಲ್ಲಾ ಸಂದರ್ಭಗಳಲ್ಲಿ ನಾನೇಕೆ ವಿನಾಕಾರಣ ಬಲಿಪಶುವಾಗುತ್ತಿದ್ದೇನೆ? ಅಂದು ನಾನು ನಿರ್ಭಿಡೆಯಿಂದ ನನಗೆ ಈ ಕೆಲಸ ಆಗುವುದಿಲ್ಲ ಎಂದು ಸಾಹೇಬರಿಗೆ ಹೇಳಬಹುದಿತ್ತಲ್ಲ? ಮತ್ತೆ ಏಕೆ ಹೇಳಲಿಲ್ಲ? ಅದರಲ್ಲಿ ನನ್ನ ಸ್ವಾರ್ಥವು ಅಡಗಿತ್ತೆ? ಅಡಗಿದ್ದರೆ ಅದೆಂಥಾ ಸ್ವಾರ್ಥ? ನಾನಿಲ್ಲಿ ಕಷ್ಟಪಟ್ಟು ಅವರ

ಸಾಮಾನುಗಳನ್ನು ಒಯ್ದುಕೊಟ್ಟರೆ, ಒಂದು ಧನ್ಯವಾದವನ್ನು ಕೂಡ ಹೇಳುವ ಸೌಜನ್ಯತೆ ಅವನಲ್ಲಿರುವುದಿಲ್ಲ. ಇಂಥವರಿಂದ ನನಗೆ ತಿರುಗಿ ಪಡೆಯುವದಕ್ಕಾದರೂ ಏನಿರುತ್ತದೆ? ಇದರಿಂದ ಎಲ್ಲಿದೆ ನನ್ನ ಸ್ವಾರ್ಥ ಸಾಧನೆ? ಧಾರವಾಡಕ್ಕೆ ಹೋಗಿ ತಿರುಗಿ ಬರುವವರೆಗೂ ಬಸ್ಸಿನಲ್ಲಿ ಈ ತರಹದ ಮಂಥನ ನಡೆದಿತ್ತು. ಹೋಗಿ ಬರುವದರಿಂದಾಗುವ ದೈಹಿಕ ಶ್ರಮಕ್ಕಿಂತಲೂ, ಮಾನಸಿಕವಾಗಿ ಹೆಚ್ಚು ಬಳಲಿದಂತೆ ಭಾಸವಾಯ್ತು. ಅಷ್ಟರಲ್ಲಿ ಹುಬ್ಬಳ್ಳಿಯ ಸುರಮಾಂಡೇಕರರ ಮನೆಗೆ ಬಂದಾಗಿತ್ತು. ಬಾಗಿಲಲ್ಲಿ ನನ್ನನ್ನು ನೋಡಿದ ತಕ್ಷಣ ಸುರಮಾಂಡೇಕರರು

''ಏ ಗುಂಡ್ಯಾ, ಗುಲಬರ್ಗಾಕ್ಕೆ ಹೋಗಲಿಕ್ಕಿಟ್ಟ ಸಾಮಾನು ತಂದುಕೊಡೋ'' ಎಂದರು.

ಅಷ್ಟರಲ್ಲಿ ಒಬ್ಬ ಹುಡುಗ ಸುಮಾರು ಹನ್ನೆರಡು ಹದಿಮೂರು ವಯಸ್ಸಿನವನಿರಬೇಕು, ಎದ್ದು ಒಳಗೆ ಹೋದ. ಅವನೇ ಗುಂಡ್ಯಾ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆತ ಒಳಗಿನಿಂದ,

''ನನಗೊಬ್ಬನಿಗೆ ಎತ್ತಲಿಕ್ಕಾಗವಲ್ಲದು, ಶೀನ್ಯಾನ್ನೂ ಕಳಿಸು'' ಎಂದು ಕೂಗಿಕೊಂಡ.

ನಾ ಅಂಜಿದೆ. ಇಬ್ಬರೆತ್ತುವಷ್ಟು ದೊಡ್ಡದು, ಇಲ್ಲಾ ಭಾರವಾದದ್ದು ಇಲ್ಲವೇ ಎರಡೂ ಇರಬಹುದಾದ ಈ ಸಾಮಾನನ್ನು ನಾ ಒಬ್ಬನೇ ಹೇಗೆ ಒಯ್ಯುವುದು ಎಂದುಕೊಂಡೆ. ಹೆದರಿಕೆಯಲ್ಲೂ ಕುತೂಹಲ ಕೆರಳಿ ಆ ವಸ್ತು ಯಾವದೆಂದು ತಿಳಿದುಕೊಳ್ಳಲು ನೋಡುತ್ತೇನೆ, ಇಬ್ಬರು ಕೂಡಿ ಹೊತ್ತುಕೊಂಡು ಬರುತ್ತಿದ್ದಾರೆ ಒಂದು ದೊಡ್ಡ ಹಲಸಿನ ಹಣ್ಣನ್ನು. ತಂದಿಟ್ಟರು ನನ್ನ ಮುಂದೆ: ಮೈ ತುಂಬಾ ಮುಳ್ಳಾಗಿರುವ, ಉದ್ದ ಯಾವುದು, ಅಡ್ಡ ಯಾವುದು ಎಂದು ಹೇಳಲಿಕ್ಕಾಗದ ಈ ಹಲಸಿನ ಹಣ್ಣು, ರಾಮಾಯಣದಲ್ಲಿನ ರಾಕ್ಷಸರ ಕೈಯಲ್ಲಿಯ ಗದೆಯಂತೆ ಗೋಚರವಾಗತೊಡಗಿತ್ತು. ಇದನ್ನು ತೆಗೆದುಕೊಂಡು ಪ್ರಯಾಣಿಸಬೇಕಾದ ಅನಿವಾರ್ಯತೆಯನ್ನು ನೆನೆಸಿದ ಕೂಡಲೇ ಕಾಲಲ್ಲಿಯ ಶಕ್ತಿ ಉಡುಗಿದಂತೆ ಭಾಸವಾಯ್ತು.

''ಹಾಂ, ನಿಮ್ಮ ಸಾಮಾನು ಬಂದದ ನೋಡ್ರಿ. ಇದನ್ನ ನಮ್ಮ ಪಾಪ್ಯಾಗ ಕೊಡ್ರಿ ಮತ್ತ ನನ್ನ ನಮಸ್ಕಾರಗಳನ್ನ ಹೇಳ್ರಿ.''

ಸುರಮಾಂಡೇಕರರ ಮನೆಯಿಂದ ಬಸ್‌ಸ್ಟ್ಯಾಂಡು ನಡೆದುಕೊಂಡು ಹೋಗುವಷ್ಟೆ ದೂರ. ಆದರ ಆ ಅಸಡ್ಡಾಳ ಗಾತ್ರದ ಹಲಸಿನ ಹಣ್ಣನ್ನು ಒಯ್ಯಬೇಕಾದರ ಆಟೋದ ಅವಶ್ಯಕತೆ ಬಹಳ ಇತ್ತು. ನಾ ಎಂದೂ ಆಟೋದಾಗ ಹತ್ತಿ ಪ್ರಯಾಣ ಮಾಡಲಿಕ್ಕೆ ಇಚ್ಛೆ ಮಾಡದವ. ಯಾಕಂದ್ರ ಅದರ ದರ ನೋಡಿದರ ಯಾಕೋ ಆಟೋದಾಗ ತಿರುಗಾಡುದಂದ್ರನೇ ಒಂದು ಕ್ರಿಮಿನಲ್ ವೇಸ್ಟ್ ಅನಸ್ತದ. ಆಟೋ ಇವತ್ತು ಅನಿವಾರ್ಯವಾಗಿತ್ತು. ಬಸ್‌ಸ್ಟ್ಯಾಂಡ್ ಮುಂದೆ ಆಟೋದ ಬಿಲ್ ಕೊಟ್ಟೆ. ಸಾಮಾನ್ಯವಾಗಿ, ಕ್ವಚಿತ್ತಾಗಿ ಆಟೋದಲ್ಲಿ ಪ್ರವಾಸ ಮಾಡಿ ಬಿಲ್ ಕೊಡುವಾಗ ವಿನಾಕಾರಣ ಆಟೋ ಡ್ರೈವರ ಮ್ಯಾಲ ಸಿಟ್ಟು ಬರುತ್ತಿತ್ತು. ಆದರೆ ಇವತ್ತು ಸಿಟ್ಟು ಹಲಸಿನ ಹಣ್ಣಿನ ಮೇಲೆ ಬಂದಿತು. ಯಾರೋ ಹಗಲ ಹೊತ್ತಿನಲ್ಲೆ ಪಾಕೀಟ ಹೊಡೆದ ಅನುಭವ ಆದ ಹಾಂಗೆ ಆಯ್ತು.

ಗುಲಬರ್ಗಾಕ್ಕೆ ಹೋಗುವ ಬಸ್ಸು ಬಂದು ನಿಂತುಕೊಂಡಿತು. ಬಸ್ಸಿನ ಬಾಗಿಲ ಮುಂದೆ ಹತ್ತುವವರ ಗದ್ದಲ ಯಥಾ ಪ್ರಕಾರವಾಗಿ ಬಹಳ ಇತ್ತು. ಈ ಗದ್ದಲದಾಗ ಬಸ್ ಹತ್ತಬೇಕಂದ್ರ ಹತ್ತೂದ್ಹ್ಯಾಂಗ? ಅದೂ, ಇಂಥಾ ದೊಡ್ಡ ಹಲಸಿನ ಹಣ್ಣು ತೊಗೊಂಡು! ಬಹಳ ಕಷ್ಟಪಟ್ಟೆ. ಹಲಸಿನ ಹಣ್ಣಿನ ಒರಟಾದ ಭಾಗ ಯಾರು ಯಾರಿಗೆ ತಗಲುವದೋ ಅವರಿಂದೆಲ್ಲ ಆವಾಗಾವಾಗ ಬಯ್ಯಿಸಿಕೊಂಡೆ. ನನ್ನ ಸೀಟಿನ ಮೇಲೆ ಸುಸ್ತಾಗಿ ಕುಳಿತೆ. ನನ್ನ ಪಕ್ಕದಲ್ಲಿ ನನ್ನ ಪಾಲಿನ ಶನಿಯನ್ನು ಪ್ರತಿಷ್ಠಾಪನೆ ಮಾಡಿದ್ದೆ.

ಬಸ್ಸು ಹೊರಟಿತ್ತು. ಪ್ರವಾಸದಿಂದ ತೂಕಡಿಕೆಯ ನಂತರ ನಿದ್ರೆ ಪ್ರಾರಂಭವಾಗಿರಬೇಕು. ಪಕ್ಕದಲ್ಲಿ ಯಾರೋ ಕಿಟಾರನೇ ಕಿರುಚಿಕೊಂಡ ಹಾಗಾಯಿತು. ಬಸ್ಸಿನಲ್ಲಿಯ ದೀಪಗಳು ಹತ್ತಿಕೊಂಡವು.. ಬಸ್ಸು ನಿಂತಿತು. ಪಕ್ಕದಲ್ಲಿ ಒಬ್ಬ ಹುಡುಗ, ಸುಮಾರು ಐದಾರು ವರ್ಷದವನಿರಬೇಕು. ನನ್ನ ಹಲಸಿನ ಹಣ್ಣಿನ ಮೇಲೆ ಬಿದ್ದಿದ್ದ. ಅಲ್ಲಲ್ಲಿ ತರಚಿ ರಕ್ತ ಬಂದಂತಾಗಿತ್ತು. ಅವನ ತಾಯಿಯೋ ಹಲಸಿನ ಹಣ್ಣನ್ನು ಹಾಗೂ ನನ್ನನ್ನು ವಾಚಾಮ ಗೋಚರವಾಗಿ ಬೈಯ್ಯಲಾರಂಭಿಸಿದಾಗ ನಾನು ಅಸಹಾಯಕನಾಗಿದ್ದೆ. ನನ್ನ ಆತ್ಮವಿಶ್ವಾಸ ಕುಂದಿದಂತೆ ಭಾಸವಾಯ್ತು.

ಅಷ್ಟರಲ್ಲಿ ಕಂಡಕ್ಟರ ಬಂದ.

''ಯಾರದ್ರಿ ಇದು ಹಲಸಿನ ಹಣ್ಣು?''

'ನನ್ನದು' ಎಂದು ಹೇಳುವ ಮೊದಲೇ ಎಂಟ್ಹತ್ತು ಜನ ನನ್ನ ಕಡೆಗೆ ಬೆರಳು ಮಾಡಿ 'ಇವರ್ದು' ಎಂದು ತೋರಿಸಿದರು.

''ನೋಡ್ರಿ, ಪ್ಯಾಸೆಂಜರ ತಿರುಗಾಡುವ ಜಾಗದಾಗ ಇದನ್ನ ಇಡಬ್ಯಾಡ್ರಿ, ಬೇಕಾದ್ರ ನಿಮ್ಮ ಕಾಲಕೆಳಗೆ ಇಟಗೊಂಡು ಕೂಡ್ರಿ'' ಎಂದು ಕಂಡಕ್ಟರ ಆದೇಶಿಸಿದ.

ದೊಡ್ಡ ತಪ್ಪು ಮಾಡಿದವನಿಗೆ ಸಣ್ಣ ಶಿಕ್ಷೆ ಕೊಟ್ಟ ಅನುಭವ. ಹಲಸಿನ ಹಣ್ಣನ್ನು ನನ್ನ ಕಾಲ ಕೆಳಗೆ ತೂರಿಸಿದೆ. ಕಾಲುಗಳು ಎದುರಿಗಿನ ಸೀಟಿನ ಹಿಂಭಾಗದಲ್ಲಿ ನೇತು ಹಾಕಲ್ಪಟ್ಟವು. ಬಸ್ ಪ್ರಾರಂಭವಾಯ್ತು. ನಿದ್ರೆ ಮಾಡಬೇಕೆಂದರೆ ನಿದ್ರೆ ಇಲ್ಲ. ಇನ್ನೂ ಹಲಸಿನ ಹಣ್ಣಿನ ಮೇಲ್ಮೈಗೆ ನಿಧಾನವಾಗಿ ಕಾಲು ತರೆಯುತ್ತಿತ್ತು. ಸುಮಾರು ಎಂಟು ತಾಸುಗಳ ಪ್ರವಾಸ ಬಾಕಿ ಇತ್ತು. ನೆನೆಸಿಕೊಂಡ್ರೇ ಎದೆ ಝಲ್ ಎಂದಿತು.

ಸುಮಾರು ಒಂದು ಘಂಟೆಯ ಪ್ರಯಾಣವಾಗಿರಬೇಕು, ಬಸ್ ನಿಂತಿತು. ಜನ ಇಳಿದರು, ಏರಿದರು. ಏರಿದವರಲ್ಲಿ ನವವಿವಾಹಿತ ದಂಪತಿಗಳಿರಬೇಕು, ನನ್ನ ಮುಂದಿನ ಸೀಟಿನಲ್ಲಿ ಕುಳಿತರು. ಸುಮಾರು ಮತ್ತೆ ಅರ್ಧ ಘಂಟೆಯ ಪ್ರಯಾಣವಾಗಿರಬೇಕು, ಮುಂದಿನ ಸೀಟಿನಲ್ಲಿ ಕುಳಿತ ಹೆಂಗಸು ಒಂದೇ ಸಮ ವಾಂತಿ ಮಾಡತೊಡಗಿದಳು. ಬಹಳೇ ಕಿರಿಕಿರಿಯಾಯ್ತು. ಎದ್ದೆ. ಅವಳ ಗಂಡನ ಹತ್ತಿರ ಹೋಗಿ

''ನೋಡ್ರಿ ಪ್ರಯಾಣ ಒಗ್ಗಿ ಬರದಿದ್ದರೆ ಮಾತ್ರೆ ಇಟ್ಟುಕೊಳ್ಳಬಾರ್ದಾ? ಎಂಥಾ ಜನಾರಿ ನೀವು? ಎಲ್ಲರಿಗೂ ಎಷ್ಟು ತ್ರಾಸ'' ಎಂದಾಗ, ಈ ಹಿಂದೆ ನಾನು ಜನರಿಂದ ಬೈಸಿಕೊಂಡಿದ್ದರಲ್ಲಿಯ ಭಾಗಶಃ ಸೇಡು ತೀರಿಸಕೊಂಡ ಹಾಗೆ ನನಗೆ ಅನಿಸಿತು.

ಗಂಡನೆಂಬ ನನ್ನ ಹಾಗಿರುವ ವ್ಯಕ್ತಿ (ತಾವು ತಪ್ಪು ಮಾಡದಿದ್ದರೂ ಇನ್ನೊಬ್ಬರ ತಪ್ಪಿಗಾಗಿ ಬೈಸಿಕೊಳ್ಳುವವ) ಎದ್ದು ಕಂಡಕ್ಟರ ಇರುವಲ್ಲಿಗೆ ಹೋದ. ಕಂಡಕ್ಟರ ಸೀಟಿ ಊದಿದ ತಕ್ಷಣ ಬಸ್ಸು ಮತ್ತೆ ನಿಂತಿತು. ಕಂಡಕ್ಟರ ಮತ್ತು ಆ ವ್ಯಕ್ತಿ ಮತ್ತೆ ನನ್ನ ಕಡೆಗೇ ಬಂದರು.

''ನೀವು ಈ ಹಲಸಿನ ಹಣ್ಣನ್ನು ಇಟ್ಟುಕೊಂಡು ಪ್ರಯಾಣ ಮಾಡಲಾರಿರಿ'' ಎಂದ ಕಂಡಕ್ಟರ.

''ಯಾಕೆ? ಇದೇನು ಟೈಂಬಾಬ್, ರೇಡಿಯೋ ಬಾಂಬ್ ಥರಾ ಹಲಸಿನ ಬಾಂಬೇನು'' ಸ್ವಲ್ಪ ಖಾರವಾಗಿಯೇ ಹೇಳಿದೆ.

''ಇಲ್ಲ ಈ ಹಲಸಿನ ಹಣ್ಣಿನ ವಾಸನೆಯಿಂದ ಇವರಿಗೆ ತ್ರಾಸಾಗಲಿಕ್ಕೆ ಹತ್ತೇದ. ಅದಕ್ಕ ಇದನ್ನ ಹೊರಗಡೆ ಒಗೀರಿ, ಇಲ್ಲಾ ಬಸ್ಸಿನ ಮ್ಯಾಲಾರೆ ಏರಸಿರಿ''

''ಹ್ಯಾಂಗ ಏರಸೂದು? ಯಾರ ಏರಸೂದು?

''ಅದೆಲ್ಲಾ ಗೊತ್ತಿಲ್ಲಾ. ಏನ ಮಾಡ್ತೀರೋ ನೋಡ್ರಿ'' ಕಂಡಕ್ಟರ ಕೊಂಚ ಬಿರುಸಾಗಿಯೇ ಹೇಳಿದ.

ಕಾಲ ಕೆಳಗಿಟ್ಟ ಹಲಸಿನ ಹಣ್ಣನ್ನು ಹೊರತೆಗೆದು, ಹೊತ್ತುಕೊಂಡು ಹೋಗೋದಾಯ್ತು ಬಸ್ ಮೇಲೆ ಏರಿಸಲಿಕ್ಕೆ. ಕಷ್ಟಪಟ್ಟು ಬೆನ್ನ ಮೇಲೆ ಹೊತ್ತುಕೊಂಡು, ಕಬ್ಬಿಣದ ಏಣಿ ಏರಿ ಸಿಟ್ಟಿಗೆದ್ದು ಎಸೆದೆ. ಕೆಳಗಿಳಿದು ಬಂದು ಕುಳಿತೆ. ನನ್ನ ಪಾಲಿನ ಶನಿಯನ್ನು ಕಳೆದುಕೊಂಡ ನಿರಾಳತೆಯಿತ್ತು ಮನದಲ್ಲಿ.

ಅಂತೂ ಇಂತೂ ನಾನಿಳಿಯುವ ನಿಲ್ದಾಣ ಬಂದಾಗಿತ್ತು. ಇನ್ನೂ ಬೆಳಕು ಹರಿದಿರಲಿಲ್ಲ. ನನ್ನ ಬ್ಯಾಗ ತೆಗೆದುಕೊಂಡು ನಿದ್ದೆಗಣ್ಣಲ್ಲಿಯೇ ಕೆಳಗಿಳಿದು ಹೊರಟೆ. ಕಂಡಕ್ಟರನೆಂದ ''ರ್ರೀ ನಿಮ್ಮ ಹಲಸಿನ ಹಣ್ರೀ, ಹಣ್ಣ ಇಳಿಸಿಕೊಳ್ರಿ...''

ಬಹಳ ಕಿರಿಕಿರಿಯಾಯ್ತು. ಬಿಟ್ಟು ಹೋಗಲೂ ಬರೂದಿಲ್ಲ. ತೆಗೆದುಕೊಂಡರೆ ಕಷ್ಟ ತಪ್ಪಿದ್ದಲ್ಲ. ಆ ರಾತ್ರಿಯಲ್ಲಿಯೇ ಬಸ್ಸಿನ ಮೇಲೇರಿ ಹಲಸಿನ ಹಣ್ಣನ್ನು ಇಳಿಸಿ ಬೆನ್ನ ಮೇಲೆ ಹೊತ್ತುಕೊಂಡು ಮನೆಗೆ ಬಂದೆ.

ಬೆಳಿಗ್ಗೆ ಕಚೇರಿಗೆ ಆಟೋದಲ್ಲಿ ಹಲಸಿನ ಹಣ್ಣನ್ನು ತಂದು ಸಾಹೇಬನಿಗೆ ಕೊಟ್ಟದ್ದಾಯ್ತು. ಬಸ್ಸಿನ ಮೇಲಿಟ್ಟಾಗ ಆ ಕಡೆ ಈ ಕಡೆ ಅರ್ಧಂಬರ್ಧ ಹರಿದಿತ್ತದು. ಅದನ್ನು ನೋಡಿ ಅಸಂತೃಪ್ತಿಯಿಂದ ಸಾಹೇಬ -

'ಏನ್ರಿ, ಒಂದು ಸಣ್ಣ ಕೆಲಸ ಹೇಳಿದರೂ ನೀವು ಬರೋಬ್ಬರ ಮಾಡಕೊಂಡ ಬರೂದಿಲ್ಲಲ್ರೀ. ಹಲಸಿನ ಹಣ್ಣೆಲ್ಲಾ ಒಡದ ಹೋಗೇದ' ಎಂದ.


ನನಗೆ ಬಹಳೇ ಖೇದವಾಯ್ತು. ಆ ದಿನವೇ ನಿರ್ಧರಿಸಿದೆ. ''ಯಾರ ಮೇಲಾದರೂ ನಮಗ ಸಿಟ್ಟಿತ್ತಂದ್ರ, ಅವರ ಮ್ಯಾಲ ಸೇಡ ತೀರಿಸಿಕೊಳ್ಳಬೇಕನಿಸಿದರ, ಅವರಿಗೆ ದೂರದ ಊರಿಂದ ಒಂದು ಹಲಸಿನ ಹಣ್ಣು ತೊಗೊಂಡ ಬಾ ಅಂತ ಹೇಳಬೇಕು.''

★★★

ಹಾಸ್ಯಬ್ರಹ್ಮಕ್ಕೆ ಹತ್ತರ ಸಂಭ್ರಮ

ಸಾಹಿತ್ಯಾಧಾರಿತ ಸದಭಿರುಚಿಯ ಹಾಸ್ಯವನ್ನು ತನ್ನ ಹುಟ್ಟಿನಿಂದಲೂ ಪ್ರತಿಪಾದಿಸಿಕೊಂಡು, ಪಾಲಿಸಿಕೊಂಡು ಬಂದಿರುವ ಹಾಸ್ಯಬ್ರಹ್ಮ ಟ್ರಸ್ಟ್ ಇತ್ತೀಚೆಗೆ 20-6-2004 ರಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ತನ್ನ ಹುಟ್ಟು ಹಬ್ಬವನ್ನು ಆಚರಿಸಿಕೊಂಡಿತು. ಸುಮಾರು ಹತ್ತು ವರ್ಷಗಳ ಹಿಂದೆ ಅಪರಂಜಿಯ ಹತ್ತರ ಹುಟ್ಟುಹಬ್ಬದಲ್ಲಿ ಅಪರಂಜಿಯೊಂದಿಗೆ ತನ್ನ ಬಾಂಧವ್ಯ ಬೆಸೆದುಕೊಂಡ ಹಾಸ್ಯಬ್ರಹ್ಮ ಟ್ರಸ್ಟ್ ಇಂದು ನಾಡಿನ ಖ್ಯಾತ ಹಾಸ್ಯ ಸಂಘಟನೆಯಾಗಿ ರೂಪುಗೊಂಡಿದೆ. ಹಾಸ್ಯಬ್ರಹ್ಮ ಅಪರಂಜಿ ಕೊರವಂಜಿ ಟ್ರಸ್ಟ್‌ಗಳ ಕಾರ್ಯಕ್ರಮ ಎಂದರೆ ಸದಭಿರುಚಿಯ ಹಾಸ್ಯ ಅನ್ನುವುದು ಜನಜನಿತವಾಗಿದೆ.

20-6-2004ರಂದು ಹಾಸ್ಯಬ್ರಹ್ಮ ಟ್ರಸ್ಟ್‌ನ ಬೆನ್ನು ತಟ್ಟಲು ಮಾಸ್ಟರ್ ಹಿರಣ್ಣಯ್ಯ ಅ.ರಾ.ಮಿತ್ರ ಮೊದಲಾದವರು ಬಂದಿದ್ದರು ಹಾಸ್ಯಬ್ರಹ್ಮ ನಡೆದುಬಂದ ಹಾದಿಯನ್ನು ಗುರುತಿಸಿದ ಈ ಮಹನೀಯರು ಹಾಸ್ಯದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದರು... ಮಾಸ್ಟರ್ ಹಿರಣ್ಣಯ್ಯ ತಮ್ಮ ಎಂದಿನ ಮಾತಿನ ಬಾಣ ಬೀಸಿದರೆ, ಅ.ರಾ.ಮಿತ್ರ ಹಾಸ್ಯದ ತುಣುಕುಗಳನ್ನು ಒಂದೊಂದಾಗಿ ಎಸೆದರು. ಈ ಸಂದರ್ಭದಲ್ಲಿ ಹಾಸ್ಯ ಲೇಖಕರಾದ ಎಂ.ಪಿ. ಮನೋಹರಚಂದ್ರನ್, ಬಾಗೂರು ಚಂದ್ರು, ವ್ಯಂಗ್ಯ ಚಿತ್ರಕಾರ ವಿಜಿ ನರೇಂದ್ರ, ಹಾಗೂ ನಗೆಮುಗುಳು ಸಂಪಾದಕಿ ರಶ್ಮಿ ರಾ ಹೆಬ್ಬೂರು ಅವರನ್ನು ಗೌರವಿಸಲಾಯಿತು. ಇಡೀ ಕಾರ್ಯಕ್ರಮವನ್ನು ಖ್ಯಾತ ವ್ಯಂಗ್ಯ ಚಿತ್ರಕಾರ



ಹಾಸ್ಯಬ್ರಹ್ಮ - 10 ಉದ್ಘಾಟನೆ: ಮಾಸ್ಟರ್ ಹಿರಣ್ಣಯ್ಯ, ಅ.ರಾ. ಮಿತ್ರ, ಕೃಷ್ಣ ಸುಬ್ಬರಾವ್, ಬೇಲೂರು ರಾಮಮೂರ್ತಿ

ಬಿ.ವಿ. ರಾಮಮೂರ್ತಿಯವರ ನೆನಪಿಗೆ ಅರ್ಪಣೆ ಮಾಡಲಾಗಿತ್ತು. ನರೇಂದ್ರ ಅವರು ರಾಮಮೂರ್ತಿಯವರ ವ್ಯಂಗ್ಯಚಿತ್ರ ಬಿಡಿಸಿದರು.

ಈ ಸಂದರ್ಭದಲ್ಲಿ ಹಾಸ್ಯಬ್ರಹ್ಮ-10 ವರ್ಷಗಳ ನಡಿಗೆಯ ಸವಿ ನೆನಪಿಗಾಗಿ ''ಹಾಸ್ಯೋತ್ಸಾಹ'' ನೆನಪಿನ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.


ಹಾಸ್ಯಬ್ರಹ್ಮಕ್ಕೆ ಬೆಂಬಲ ಸೂಚಿಸಲು ಎಂದಿನಂತೆ ಸಭಾಂಗಣ ಕಿಕ್ಕಿರಿದಿತ್ತು ನಿಂತವರ ಗೊಣಗಾಟವಿರಲಿಲ್ಲ ಹಾಸ್ಯಬ್ರಹ್ಮದ ಕಾರ್ಯಕ್ರಮದಲ್ಲಿ ಮೊದಲಿನಿಂದಲೂ ಜೊತೆ ಜೊತೆಯಾಗಿರುವ ಗಾನವಿನೋದಿನಿಯವರ ಮನರಂಜನಾ ಕಾರ್ಯಕ್ರಮವಿತ್ತು.

ಡಿಸೆಂಬರ್ 25, 2003ರ ಹಾಸ್ಯೋತ್ಸವಕ್ಕೆ ಸೂಜಿಗಲ್ಲಿನಂತೆ ಸೆಳೆಯಲ್ಪಟ್ಟು ಪತ್ನೀ ಸಮೇತರಾಗಿ ಬಂದು ಸುಮಾರು 3 ಗಂಟೆಗಳಿಗೂ ಹೆಚ್ಚುಕಾಲ ಹಾಸ್ಯವನ್ನು ಆಸ್ವಾದಿಸಿದ ಶ್ರೀ ಎಸ್.ಎಂ. ಕೃಷ್ಣ ದಂಪತಿಗಳು ಈ ಸಮಾರಂಭಕ್ಕೂ ಆಗಮಿಸಿ ಸಾಮಾನ್ಯರಲ್ಲಿ ಸಾಮಾನ್ಯರಂತೆ ಇದ್ದು ಇಡೀ ಕಾರ್ಯಕ್ರಮವನ್ನು ನೋಡಿ, ಕೇಳಿ, ಆನಂದಿಸಿ ಮೆಚ್ಚುಗೆಯ ನುಡಿಗಳನ್ನಾಡಿದರು.

ಹಾಸ್ಯಬ್ರಹ್ಮ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಕೃಷ್ಣ ಸುಬ್ಬರಾವ್ ಪ್ರಾಸ್ತಾವಿಕ ಮಾತುಗಳನ್ನಾಡಿದರೆ, ಇನ್ನೋರ್ವ ಟ್ರಸ್ಟಿ ಬೇಲೂರು ರಾಮಮೂರ್ತಿ ತಮ್ಮ ಎಂದಿನ ನಗೆಮೊಗದ, ಚುಟುಕು ಮಾತುಗಳ ಜೊತೆ ಜೊತೆಯಾಗಿ ಇಡೀ ಕಾರ್ಯಕ್ರಮವನ್ನು ನಿರೂಪಿಸಿದರು.

ಹಾಸ್ಯಬ್ರಹ್ಮ ಟ್ರಸ್ಟ್ ಹಾಸ್ಯ ಪ್ರಸರಣಕ್ಕೆ ಒಂದು ಮಾದರಿ ಸಂಘಟನೆಯಾಗಲಿ ಎಂದು ಅಪರಂಜಿ ನಡುಬಾಗಿಸಿ ಹಾರೈಸುತ್ತಾಳೆ.

– ಸುಕೇಶವ



ಪತ್ತಾರ ಮಾಸ್ತರರು ನಕ್ಕರು

- ಪರಮೇಶ್ವರ ಪುರಾಣಿಕ

ಬ್ಯಾಸಿಗಿ ಸೂಟಿ ಸುರು ಆತಂದ್ರ ಧಾರವಾಡದಾಗ ಎಲ್ಲಾ ಪಟ್ಟಣಗಳಾಂಗ ಬೇಸಿಗೆ ಶಿಬಿರಗಳು ಪ್ರಾರಂಭ ಆಗ್ತಾವ. ಆ ಶಿಬಿರಗಳಿಗೆ ಇತ್ತಿತ್ತಲಾಗಿ ಹೋಗುವ ಮಕ್ಕಳು ಹೆಚ್ಚಾಗ್ಯಾರ. ಮಕ್ಕಳು ಶಿಬಿರಕ್ಕ ಹೋಗೂದು ಹೆಚ್ಚ್ಯಾಗೇದಂತ ಅನ್ನೂಕ್ಕಿಂತ ಪಾಲಕರು ತಮ್ಮ ಹುಡುಗರನ್ನು ಶಿಬಿರಕ್ಕ ಕಳಸೂದು ಹೆಚ್ಚಾಗೇದ ಅನ್ನುದು ಹೆಚ್ಚು ಸಮಂಜಸ. ತಮ್ಮ ಮಕ್ಕಳು ಗಾವಸ್ಕರ ದ್ರಾವಿಡ ಶ್ರೀನಾಥ ಅವರಾಂಗ ಆಗಬೇಕೆನ್ನುವವರು ಕ್ರಿಕೇಟ್ ಕ್ಲಿನಿಕ್‌ಗೆ ಕಳಿಸಿಕೊಡ್ತಾರ. ಟಿ.ವಿ. ಸಿನೇಮಾ ಕೊನೆಗೆ ನಾಟಕದೊಳಗಾದರೂ ಪಾರ್ಟ ಮಾಡಲೆಂತ ಇಚ್ಛಾಪಟ್ಟವರು ನಾಟಕ ಶಿಬಿರಕ್ಕ ಕಳುಹಿಸಿಕೊಡ್ತಾರ. ಟೇನೀಸ್ ಶಿಬಿರ ಈಜು ಶಿಬಿರ (ಧಾರವಾಡದಲ್ಲಿ ಹತ್ತು ದಿನಕ್ಕೊಮ್ಮೆ ನೀರು ಸರಬರಾಜು ಆದರೂ ಸಹಿತ) ಮುಂತಾದ ಅನೇಕ ಶಿಬಿರಗಳು ಪ್ರಾರಂಭವಾಗುತ್ತವೆ. ಆ ಶಿಬಿರಗಳಿಗೆ ಹೋಗಲು ಇಚ್ಛಾಪಡುವದಕ್ಕಿಂತಲೂ ಸೂಟಿ ದಿವಸದಾಗ ಮನ್ಯಾಗ ಹುಡುಗರs ಗದ್ದಲ ಕಡಿಮೆಯಾಗಲಿ ಅಂತ ಮಕ್ಕಳನ್ನು ಶಿಬಿರಕ್ಕ ಕಳಸೂ ಮಂದಿನೂ ಇದ್ದಾರ. ಏನೇ ಆದರೂ ಮನಿಮಂದಿ ಕನಸ ಕಾಣ್ತಾರ. ಆ ಕನಸುಗಳನ್ನು ಬಿತ್ತಿ ಬೆಳೆಸುವವರು ಶಿಬಿರಗಳನ್ನು ನಡೆಸುವವರು. ಶಿಬಿರದ ಕೊನೆಗೆ ಒಂದು ಮ್ಯಾಚು, ಒಂದು ನಾಟಕ ಅಥವಾ ಡ್ಯಾನ್ಸ್ ನೋಡಿ ತಮ್ಮ ಕನಸುಗಳು ಸಾಕಾರಗೊಂಡ ಅನುಭವ ಪಡ್ತಾರ ಪಾಲಕರು. ಇರಲಿ ಧಾರವಾಡದಾಗ ಶಿಬಿರ ನಡಸಾವರೊಳಗ ಪತ್ತಾರ ಮಾಸ್ತರರು ಒಬ್ಬರು. ಆದರ ಅವರ ಶಿಬಿರಕ್ಕ ತಮ್ಮ ಮಕ್ಕಳನ್ನ ಕಳಸಾವರು ಭಾಳ ಕಡಿಮಿ ಮಂದಿ. ಯಾಕಂದ್ರ ಪತ್ತಾರ ಮಾಸ್ತರರು ಕನಸುಗಳನ್ನು ಹೆಣೆಯುವವರಲ್ಲ. ಕನಸುಗಳನ್ನು ಮಾರುವರಲ್ಲ. ಆದರೂ ಆರೇಳು ಹುಡುಗರು ಅವರ ಶಿಬಿರಕ್ಕ ಬರ್ತಾರ. ಅವರು ನಡೆಸುವ ಶಿಬಿರ ಯಾವದು ಗೊತ್ತೇನು? ಮಕ್ಕಳನ್ನು ಹುಂಬರನ್ನು ಅಲ್ಲಲ್ಲ ಧಾಡಸಿ ಪ್ರವೃತ್ತಿಯ ಹುಡುಗರನ್ನಾಗಿ ಮಾಡುವ ಶಿಬಿರ. ಹುಡುಗರು ಶಿಬಿರಕ್ಕೆ ಬಂದ ಕೂಡಲೆ ಅವರನ್ನು ಆಲ್ಲಿ ಇಲ್ಲಿ ಓಡಾಡಿಸಿ, ಅಡವಿ ಗುಡ್ಡಾ ಅಡ್ಡಾಡಿಸಿ ಅವರೆಲ್ಲ ಪ್ರಕೃತಿಯ ಒಂದು ಭಾಗವೆನ್ನುವ ಹಾಗೆ ಭಾವನಾ ತರಿಸಿ ಹುಡುಗರನ್ನು ಗಂಡು ಹುಡುಗರನ್ನಾಗಿ ಮಾಡಿ, ಮನೆಗೆ ಮರಳಿ ಕಳಿಸುವದು ಪತ್ತಾರ ಮಾಸ್ತರರ ಪ್ರತಿ ವರುಷದ ಕಾರ್ಯಕ್ರಮವಾಗಿತ್ತು. ಅಂತು ಇಂತು ಅವರ ಶಿಬಿರ ನಡೆಯುತ್ತಿತ್ತು. ಹಂಗ ಹೋದ ವರುಷಾನೂ ಶಿಬಿರ ನಡೆದಿತ್ತು. ಶಿಬಿರಕ್ಕ ಎಂಟು ಜನ ಬಂದಿದ್ರು. ಶಿಬಿರ ಸುರು ಆದಮ್ಯಾಲೆ ಇಬ್ಬರು ಓಡಿ ಹೋದರು. ಆರೇ ಮಂದಿಯ ಶಿಬಿರವನ್ನು ನಡೆಸಿದರು ಶಿಬಿರದ ಕೊನೆಗೆ ಶಿಬಿರಾರ್ಥಿಗಳನ್ನು ಬೆಂಗಳೂರಿಗೆ ಕರೆದುಕೊಂಡು ಪತ್ತಾರ ಮಾಸ್ತರು ಬಂದು ಕೆಂಪೇಗೌಡ ವೃತ್ತದಲ್ಲಿಯ ಒಂದು ಹೋಟೆಲದಲ್ಲಿ ಇಳಿದುಕೊಂಡರು. ಸಾಯಂಕಾಲ ಹೋಟೆಲದಲ್ಲಿಯೇ ಇದ್ದು ರಾತ್ರಿ ಎಲ್ಲ ಹುಡುಗರನ್ನು ತಮ್ಮ ಖೋಲಿಗೆ ಕರೆಸಿಕೊಂಡರು. ಹೇಳತೊಡಗಿದರು. ಎಲ್ಲಾರೂ ಲಕ್ಷಗೊಟ್ಟು ಕೇಳ್ರಿ, ಇದು ನಮ್ಮ ಶಿಬಿರದ ಕೊನೆಯ ಕಸರತ್ತು. ನಿಮ್ಮ ಜಾಣತನ,

ಶಾಣ್ಯಾತನ ಪರೀಕ್ಷಾ ಮಾಡು ಅಭ್ಯಾಸ. ನಾಳೆ ಮುಂಜಾನೆ ನಿಮ್ಮನ್ನ ಬೆಂಗಳೂರಿನ ಹೊರ ವಲಯದಲ್ಲಿ ಬಿಡ್ತಿವಿ. ಇಬ್ಬರಿಬ್ಬರದ್ದು ಒಂದು ಗುಂಪು. ನೀವು ಸಾರ್ವಜನಿಕರ ಸಹಾಯ ಪಡೆದು ಇದ್ದ ಹೋಟೆಲಿಗೆ ಬರಬೇಕು. ಯಾರೂ ಬಸ್ಸಿನ್ಯಾಗ ಬರೂಹಂಗಿಲ್ಲ. ನಿಮಗೂ ರೊಕ್ಕ ಬೇಕಾದಷ್ಟು ಕೊಟ್ಟಿರ್ತದ. ಹಸಿವಿ ಆದರ ಹಾದಿ ಒಳಗ ಸಿಗು ಹೋಟೆಲದಾಗ ಫರಾಳ ಮಾಡಬಹುದು, ಊಟಾ ಮಾಡಬಹುದು. ಒಟ್ಟಿನ ಮ್ಯಾಲೆ ಸಂಜಿ ನಾಲ್ಕರೊಳಗ ಈ ಹೋಟೆಲಕ್ಕ ಬರಬೇಕು. ನಿಮಗ ಈ ಹೋಟೆಲ ಟೆಲಿಫೋನ್ ನಂಬರು, ಪೋಲೀಸರ ನಂಬರು ಮತ್ತು ನನ್ನ ಮೊಬಾಯಲ ನಂಬರ ಕೊಡ್ತದ. ಅವಶ್ಯವಿದ್ದಷ್ಟೂ ಟೆಲಿಫೋನ್ ಮಾಡ್ರಿ, ಯಾರೂ ಅಂಜು ಕಾರಣವಿಲ್ಲ. ತಿಳಿತ? ಮಾತು ಮುಗಿಸಿದರು. ಎಲ್ಲ ಹುಡುಗರು ತಲೆಯಾಡಿಸಿದರು. ಮರುದಿನ ಮುಂಜಾನೆ ಏಳು ಘಂಟೆಗೆ ಆರು ಹುಡುಗರನ್ನು ಮೂರು ಗುಂಪುಗಳಲ್ಲಿ ಬೆಂಗಳೂರಿನ ಮೂರು ಬೇರೆ ಬೇರೆ ಹೊರ ವಲಯದ ಸ್ಥಳದಲ್ಲಿ ಬಿಡಲಾಯಿತು. ಒಂದು ಗುಂಪನ್ನು ಯಲಹಂಕದ ಹೊರ ವಲಯದಲ್ಲಿ ಎರಡನೇ ಗುಂಪನ್ನು ಬೆಂಗಳೂರು ಏರ್‌ಪೋರ್ಟದ ಹತ್ತಿರ ಮೂರನೇ ಗುಂಪನ್ನು ಮೈಸೂರು ರೋಡಲ್ಲಿ ಇರುವ ಬಿಡದಿಯಿಂದ ಹತ್ತು ಕಿಲೋಮೀಟರ್ ದೂರದಲ್ಲಿ ಇಳಿಸಲಾಯಿತು.

ಸಂಜಿ ನಾಲ್ಕುವರೆಗೆ ಆರೂ ಹುಡುಗರು ದಣಿದು ಬಸವಳಿದು ಕೆಂಪೇಗೌಡ ವೃತ್ತದಲ್ಲಿ ಇರುವ ಹೋಟೆಲಿಗೆ ಬಂದರು ಬಂದವರೇ ತಮ್ಮ ಬೋಲಿಯಲ್ಲಿ ತಮ್ಮ ಬಗಲ ಚೀಲ ಚೆಲ್ಲಿ ಗೋಡೆಗಳಿಗೆ ಕಾಲುಗಳನ್ನು ವರಗಿಸಿ ವಿಶ್ರಾಂತಿ ತೆಗೆದುಕೊಂಡು ಎಂಟು ಘಂಟೆಗೆ ಮಾಸ್ತರರ ಬೋಲಿಗೆ ಬಂದರು. ಮಾಸ್ತರರಿಗೆ ವಂದಿಸಿ ಕುಳಿತುಕೊಂಡರು. ಹುಡುಗರೆ, ನೀವೆಲ್ಲ ಇಂದಿನ ಪರೀಕ್ಷೆಯಲ್ಲಿ ಪಾಸಾಗಿದ್ದೀರಿ. ನೀವು ಅಡವಿ ಗುಡ್ಡ ಮುಂತಾದವುಗಳಲ್ಲಿ ಅಡ್ಡಾಡಿ ಕುಣಿದಾಡಿದ್ದೀರಿ. ಯಾವದೇ ಸಂದರ್ಭಗಳನ್ನು ಎದಿರಿಸುವ ತಾಕತ್ತನ್ನು ಪಡೆದಿದ್ದೀರಿ. ಅದರಂತೆ ಇಂದು ಬೆಂಗಳೂರಿನಂಥ ಸಿಮೆಂಟ್ ಇಮಾರತ ಅಡವಿಯಲ್ಲೂ ಅಡ್ಡಾಡಿ ಹೊಸ ತಾಕತ ಪಡೆದಿದ್ದೀರಿ. ನಿಮಗೆ ಆದ ತೊಂದರೆ ತ್ರಾಸು ಹೇಳ್ರಿ. ನಿಮ್ಮ ಅನುಭವ ತಿಳಿಸಿರಿ. ಎಲ್ಲರೂ ಒಬ್ಬೊಬ್ಬರಾಗಿ ತಮ್ಮ ಅನುಭವ, ತಮಗಾದ ತ್ರಾಸುಗಳನ್ನು ಹೇಳಿದರು. ಕೊನೆಯಲ್ಲಿ ಎಲ್ಲ ಶಿಬಿರಾರ್ಥಿಗಳ ಪರವಾಗಿ ಧಾರವಾಡದ ಮಾಳನುಡಿ ಚನ್ನಪ್ಪ ಮಾಸ್ತರರ, ನೀವು ಬೆಂಗಳೂರಿನ ಬಗ್ಗೆ ಪೂರ್ಣ ಮಾಹಿತಿ ನಮಗ ಕೊಟ್ಟಿರದಿದ್ದರೂ ನಮಗ ಸಿಟ್ಟಿಲ್ಲ. ಆದರ ಇಲ್ಲಿಯ ಕನ್ನಡ ಭಾಷಾದ ಬಗ್ಗೆ ನೀವು ಏನೂ ಹೇಳಿರಲಿಲ್ಲ. ಅದಽ ನಮಗ ತ್ರಾಸ ಆತು, ವಾಂಗ, ಸಾಪಡಾ, ವೇಣುಮಾ, ಉಂಗಳ, ಪೋಯಿಟ್ಟುವರಾ ಪನ್ನೆಂಡು ಅಂಬುದು ಹಿಂಗ ಮಾತಾಡ್ತಿದ್ರು. ನಮಗ ಈ ಕನ್ನಡ ಗೊತ್ತಿಲ್ಲ ಬಿಡ್ರಿ. ಬೆಂಗಳೂರಾಗ ಅಂದ್ರ ಕರ್ನಾಟಕದ ರಾಜಧಾನಿಯೊಳಗ ಮಾತಾಡು ಕನ್ನಡ ನಮಗ್ಯಾಕ ನೀವು ಮೊದಲ ಕಲಸಲಿಲ್ಲ? ಇನ್ನು ನಾಲ್ಕು ದಿವಸ ಇಲ್ಲಿದ್ದು ಬೆಂಗಳೂರು ಕನ್ನಡ ಕಲತಽ ಹೋಗುಣ್ರಿ.' ಪತ್ತಾರ ಮಾಸ್ತರರು ನಗತೊಡಗಿದರು ನಕ್ಕಿದ್ದು ಮಕ್ಕಳ ಮುಗ್ಧತೆಗೋ ಬೆಂಗಳೂರಿನ ದುರ್ದೈವಕ್ಕೋ ಗೊತ್ತಾಗಲಿಲ್ಲ.

★★★

ರಾ.ಶಿ. ಅವರ ಜೊತೆ

– ಪ್ರಕಾಶ್

1965 ರಲ್ಲಿ ದೆಹಲಿಗೆ ಹೋಗೋಣ ಅಂತ ನಾನು, ರಾಮು (ನನ್ನ ಖಾಸಾ ಗೆಳೆಯ, ಪ್ರಭಾ ಐ ಕ್ಲಿನಿಕ್‌ನ ರಾಮಚಂದ್ರಮೂರ್ತಿ) ಯೋಜನೆ ಹಾಕಿದೆವು. ಅಲ್ಲಿ ಸಫ್‌ದರ್‌ಜಂಗ್ ಆಸ್ಪತ್ರೆ ಮತ್ತು AIIMS ನಲ್ಲಿ ಓದೋಣ ಅಂತ. ನಮ್ಮ ದುರದೃಷ್ಟಕ್ಕೆ ಇಂಡಿಯಾ-ಪಾಕೀಸ್ತಾನ ಯುದ್ಧ ಶುರು, ಸೆಪ್ಟೆಂಬರ್ ಆರಕ್ಕೆ ನಂ ಪ್ರಯಾಣ! ಅಪ್ಪನಿಗೆ ಬಹು ಆತಂಕ ಶುರು! ನಾನು ಇಲ್ಲ, ಹೋಗಲೇಬೇಕು ಅಂತ, ಅವರು ರೇಗಿ, "give me one reason why you are so keen to go' ಅಂದರು 'ನಾವು ಆಗಲೇ ಪಾರ್ಟಿ ತೆಗೆದುಕೊಂಡಿದೀವಿ! ನಾಳೆ ತಿರುಗಿ ಹೇಗೆ ಬೆಂಗಳೂರಲ್ಲೇ ಮುಖ ತೋರಿಸೋದು' ಅಂದೆ. ಆ ಕೋಪ, ಆತಂಕಭರಿತ ಮುಖದಲ್ಲೂ ನಗೆಯ ಛಾಯೆ ಮೂಡಿತು. ಸರಿ, ಏನ್ ಬೇಕಾರೂ ಮಾಡಿಕೋ ಅಂದರು. ಹಾಗೇ ಮಾಡಿದೆ!

★★★

ನಾವೆಲ್ಲ ಸ್ಕೂಲಿಗೆ ಹೋಗ್ತಿದ್ದಾಗ, ತಿಂಗಳಿಗೊಮ್ಮೆ ಫೀಸ್ ಬೇಕಲ್ಲ? ಹತ್ತು ರೂಪಾಯಿ ಕೇಳ್ತಾ ಇದ್ದೆ. ಅದರಲ್ಲಿ ಏನೇನು ಖರ್ಚು ಅಂತ ಅಪ್ಪ ಕೇಳ್ತಾ ಇದ್ರು. ಐದು ರೂಪಾಯಿ ಫೀಸು, ಮೂರು ರೂಪಾಯಿ ನೋಟ್‌ಬುಕ್, ಪೆನ್ಸಿಲ್ ಇತ್ಯಾದಿ, ಒಂದು ರೂಪಾಯಿ ಕ್ರಿಕೆಟ್ ಬಾಲ್, ಇನ್ನೊಂದು 'ಇತರೆ' ಅಂದೆ. ಅಂದ್ರೆ, ಸೌತೆಕಾಯಿ, ಕಡಲೆಕಾಯಿ ಇತ್ಯಾದಿ ಅಲ್ವೇನೋ ಅಂತಿದ್ರು! ನೀನೇ ವಾಸಿ ಕಣೋ, ನನಗಂತೂ ಬೇಯಿಸಿದ್ದೇ ಸಿಗೋದು, ಫ್ರೆಷ್ ಏನು ದಕ್ಕುಲ್ಲ ಅಂತ ನಗ್ತಿದ್ರು!

★★★

ಜೋಕ್ ಮಾಡುವಾಗ ಬಹಳ ಹುಷಾರಾಗಿ ಇರಬೇಕು ಕಣೋ ಅಂದರು. spontaneous ಆಗಿ ಜೋಕ್ ಮಾಡುವಾಗ ಹುಷಾರಾಗಿ ಹೇಗೆ ಇರೋದು ಅಂದೆ. ಸ್ವಲ್ಪ ಹೊತ್ತು ಸುಮ್ಮನಿದ್ದರು. ಆಮೇಲೆ ನಿಧಾನವಾಗಿ ಹೇಳಿದರು. "ನೋಡು, A Joke must be just sharp enough to tickle, but not so sharp as to hurt!"

★★★

ಆಂ! ಅಂದ್ಹಾಗೆ ಜ್ಞಾಪಕಕ್ಕೆ ಬಂತು

- ಮಣಿ

ಚಿ||ಸೌ||ಹ||ಕುಂ||ಶೋ|| ಶಾಂತಳಿಗೆ ನಿನ್ನ ಅತ್ತೆ ವೇದಾಂತಮ್ಮ ಮಾಡುವ ಆಶೀರ್ವಾದಗಳು. ಇಲ್ಲಿ ನಾನು, ನಿನ್ನ ಮಾವ ಕ್ಷೇಮ. ಅಲ್ಲಿ ನೀವು ಕ್ಷೇಮವೇ? ಮಂಜು ಆಡಿಕೊಂಡಿದ್ದಾಳ್ಯೇ? ಮಗೂನ ಚೆನ್ನಾಗಿ ನೋಡಿಕೊ. ಭಾನುವಾರ ಬೆಳಿಗ್ಗೆ ಬೆಂಗ್ಳೂರು ಬಿಟ್ಟೋರು ಮಧ್ಯಾಹ್ನ ಹನ್ನೆರಡಕ್ಕೆ ಕುಕ್ಕೆ ಕ್ಷೇತ್ರಕ್ಕೆ ಬಂದ್ವಿ. ಹೇಗಿದ್ಯಮ್ಮಾ ಈ ಕ್ಷೇತ್ರ! ಆ ದೇವಸ್ಥಾನ, ಅದಿರೋ ಸ್ಥಳ - ಸುಬ್ರಹ್ಮಣ್ಯಸ್ವಾಮಿ! ಅಬ್ಬ! ಆನಂದವಾಗುತ್ತೆ. ಇಲ್ಲೆ ಇದ್ಬಿಡೋಣ ಅನ್ಸುತ್ತೆ. ಇಲ್ಲಿ ರಸ್ತೇನೂ ಅಷ್ಟೆ. ಬೆಟ್ಟ-ಗುಡ್ಡ-ತೋಟಗಳು-ನದಿ-ಸುತ್ಕೊಂಡ್ ಸುತ್ಕೊಂಡು ಸುಬ್ರಹ್ಮಣ್ಯಸ್ವಾಮಿ ಹರಿಯೋ ಹಾಗೇ ಇದೆ.

ಆಂ! ಅಂದ್ಹಾಗೆ - ಸುಬ್ರಹ್ಮಣ್ಯ ಸ್ವಾಮಿ ಅಂದಿದಕ್ಕೆ ಜ್ಞಾಪಕಕ್ಕೆ ಬಂತು. ಪಕ್ಕದ್ಮನೆ ಪಾತಮ್ಮ ಮನೆ ಹಿತ್ತಲ್ಲಿ ಕೆಲಸಕ್ಕೆ ಬಾರದ ಗಿಡ-ಗೆಂಟೆ ಎಲ್ಲಾ ಬೆಳೆಸ್ಕೊಂಡಿದ್ದಾಳೆ. ಹಾವುಗಳಿದ್ರೂ ಆಶ್ಚರ್ಯವೇನಿಲ್ಲ. ಹುಷಾರು-ಕತ್ಲಾದ್ಮೇಲೆ ಹಿತ್ತಿಲ ಬಾಗಿಲು ತೆಗೀಲೇಬೇಡ.

ಈ ಊರು ಎಷ್ಟು ಬೇಗ ಬಿಡ್ತೀವೋ ಅನ್ನಿಸ್ಬಿಡುತ್ತಮ್ಮ - ಹಾಳು ಬಿಸಿಲು. ಸರಿ, ಅಲ್ಲಿಂದ ಧರ್ಮಸ್ಥಳಕ್ಕೆ ಹೊರಟ್ವಿ. ದಾರಿ ಮಧ್ಯೆ - ನೀರು ನೆರಳು ಇರೋಕಡೆ ತಂದಿದ್ದ ಹುಳಿ ಅನ್ನ - ಮೊಸರು ಅನ್ನ ತಿಂದು ಮುಂದೆ ಹೊರಟು ಸಾಯಂಕಾಲ ಆರು ಗಂಟೆಗೆ ಧರ್ಮಸ್ಥಳಕ್ಕೆ ಬಂದ್ವಿ. ಎಂಥ ಪುಣ್ಯ ಭೂಮೀನಮ್ಮ ಇದು! ಮೈ ಜುಂ ಅನ್ನುತ್ತೆ. ಇನ್ನು ಮಂಜುನಾಥನ್ನ ನೋಡಿದ್ಮೇಲಂತೂ ನಮ್ಮ ಜನ್ಮವೇ ಪಾವನವಾಯ್ತು ಅನ್ಸುತ್ತೆ.

ಆಂ! ಅಂದ್ಹಾಗೆ ಮಂಜುನಾಥ ಅಂದಿದ್ದಕ್ಕೆ ಜ್ಞಾಪಕಕ್ಕೆ ಬಂತು. ಆ ಮೂಲೆ ಮನೆ ಮಂಜಯ್ಯ ಮನೆಗೆ ಬರ್ತಾ ಇದ್ದಾನೇನು? ಅವನ್ನ ಜಾಸ್ತಿ ಹಚ್ಕೊಬೇಡ ಅಂತ ಹೇಳು ನಿನ್ನ ಗಂಡನ್ಗೆ. ಅವನು ಬಂದು ಕುಕ್ಕರಿಸಿದ್ರೆ, ಮುಗೀತು - ತಿಂಡಿ-ಕಾಫಿ-ಊಟ ಎಲ್ಲಾದಕ್ಕು ವಕ್ಕರಿಸಿ ಬಿಡ್ತಾನೆ.

ಅಲ್ಲಿ ಯಾವ್ದೋ ಒಂದು ಹೋಟಲಿನಲ್ಲಿ ಊಟದ ಶಾಸ್ತ್ರ ಮುಗಿಸಿ, ಚೌಲ್ಟ್ರೀಲಿ ರಾತ್ರಿ ಕಳೆದು ಬೆಳಿಗ್ಗೆ ಎದ್ದು ಸ್ನಾನ ಮುಗಿಸಿ ಕಟೀಲಿಗೆ ಹೊರಟ್ವಿ. ನೀನೇನೇ ಹೇಳು ಶಾಂತ - ಇಂಥ ಸ್ಥಳಗಳನ್ನ ನೋಡ್ತಾ ಇದ್ರೆ, ಊಟ -ತಿಂಡಿ ನಿದ್ದೆ ಏನೂ ಬೇಡ ಅನ್ನಿಸಿಬಿಡುತ್ತೆ. ಸರಿ ದಾರೀಲಿ ಒಂದು ಒಳ್ಳೆ ಹೋಟಲಿನಲ್ಲಿ ಇಡ್ಲಿ-ವಡೆ-ದೋಸೆ-ಕಾಫಿ ಎಲ್ಲಾ ಮುಗಿಸಿಕೊಂಡು ಕಟೀಲು ಸೇರಿದ್ವಿ. ಅಂದ್ರೆ - ಪುಣ್ಯ ಕ್ಷೇತ್ರಗಳು ಅನ್ಬಾರ್ದು - ಟೈಂಗೆ ಸರಿಯಾಗಿ ಊಟ-ತಿಂಡಿ ಇಲ್ಲ - ಹಾಸ್ಕೊಳೋಕಿಲ್ಲ - ಹೊದ್ಕೊಳ್ಳೋಕಿಲ್ಲ. ಒಂದೊದ್ಸಲ ಬೇಜಾರಾಗ್ಬಿಡುತ್ತಮ್ಮ. ಇಲ್ಲಂತೂ - ದೊಡ್ಡ ದೇವಸ್ಥಾನ ಸುತ್ತ ಮುತ್ತಲ ದೃಶ್ಯ - ನಮ್ಮನ್ನು

ನಾವೇ ಮರೆತುಬಿಟ್ಟೇವೆ. ಆ ಮಹಾತಾಯಿ ಹೇಗಿದ್ದಾಳೆ! ಸರ್ವಮಂಗಳ ಮಾಂಗಲ್ಯೆ! ದುರ್ಗಾ ಪರಮೇಶ್ವರಿ!

ಆಂ! ಅಂದ್ಹಾಗೆ ದುರ್ಗ ಅಂದಿದ್ದಕ್ಕೆ ಜ್ಞಾಪಕಕ್ಕೆ ಬಂತು. ಆ ಕಾವೇರಿ ಬಾಯಿ ಮಧ್ಯಾಹ್ನದ್ಹೊತ್ತು ಮನೆಗೆ ಬರ್ತಾಳೇನು? ಅವಳ್ನ ಜಾಸ್ತಿ ಸೇರಿಸ್ಬೇಡ. ಸದಾ ಪರನಿಂದೆ-ಚಾಡಿ-ತರಲೆ-ಜೊತೆಗೆ ಜಗಳಗಂಟಿ. ಯಾವ್ದಾದ್ರು ಬಾವೀಗೆ ಬೀಳ್ಬೋದು ಅವ್ಳ ಬಾಯಿಗೆ ಮಾತ್ರ ಬೀಳ್ಬಾರ್ದು. ಜಾಗ್ರತೆ.

ಅಲ್ಲಿಂದ ಉಡುಪಿಗೆ ಹೋದ್ವಿ. ಅದೇನು ಊರಮ್ಮ! ಅಲ್ಲಿ ಓಡಾಡಿದ್ರೇನೇ ಆನಂದವಾಗುತ್ತೆ. ಜನ್ಮ ಸಾರ್ಥಕವಾಯ್ತು ಅನ್ಸುತ್ತೆ. ಆ ಕೃಷ್ಣ - ಮೊದ್ಲೇ ಹೇಳಲ್ವೇ 'ಕೃಷ್ಣ ವಿಗ್ರಹ' ಅಂತ? ಹಾಗಿದ್ದಾನೆ. ನಮ್ಮ ಮಹಿಳಾ ಮಂಡಳಿಯೋರು ಹಾಡಲ್ವೇ 'ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ' ಅಂತ? ಹಾಗಿದ್ದಾನಮ್ಮ ಅವನ್ನ ನೋಡಿದ್ಮೇಲೆ. ಅವು ಕಣ್ಣೂ ಅಲ್ಲ. ಅದು ಮಾನವ ಜನ್ಮವೂ ಅಲ್ಲ. ನಮ್ಮ ಹರಿಕಥೆ ದಾಸ್ರು ಹೇಳ್ತಾರಲ್ಲಾ ಆ ಕೃಷ್ಣನ ಬಾಲ ಲೀಲೆಗಳು - ಅವನು ಆಡಿದ್ದು-ಪಾಡಿದ್ದು. ಬೆಣ್ಣೆ ಕದ್ದಿದ್ದೂ ಎಲ್ಲಾ ಬಂದು ಕಣ್ಮುಂದೆ ನಿಲ್ಲುತ್ವೆ.

ಆಂ! ಅಂದ್ಹಾಗೆ ಬೆಣ್ಣೆ ಅಂದಿದಕ್ಕೆ ಜ್ಞಾಪಕಕ್ಕೆ ಬಂತು. ಹೊರಡೋಕೆ ಮುಂಚೆ ಒಂದು ಕೆ.ಜಿ. ಬೆಣ್ಣೆ ಕಾಸಿಟ್ಟಿದ್ದೆ. ಹೊರಡೋ ಆತುರದಲ್ಲಿ ಡಬ್ಬಿ ಮುಚ್ಚಳ ಮುಚ್ಚಿದ್ನೋ ಇಲ್ವೋ? ಸ್ವಲ್ಪ ನೋಡಮ್ಮ. ಇರುವೆ, ನೊಣ, ಜಿರಳೆ ಬಿದ್ದು ಹಾಳಗ್ಹೋದೀತು - ಪ್ಯೂರ್ ಬೆಣ್ಣೆ - ಹೊಳೆನರಸೀಪುರದ್ದು.

ಉಡುಪಿಯಿಂದ ಹೊರಟು ಅಂಬಲಪಾಡಿಗೆ ಹೋಗಿ ಅಲ್ಲಿ ದುರ್ಗಾ ಪರಮೇಶ್ವರಿ - ಲಕ್ಷ್ಮೀ ನಾರಾಯಣರ ದರ್ಶನ ಮಾಡ್ಕೊಂಡು ಆನೆಗುಡ್ಡ ಹಟ್ಟಿ ಅಂಗಡಿಗಳಿಗೆ ಹೋದ್ವಿ - ಎರಡೂ ಪ್ರಸಿದ್ಧವಾದ ಗಣಪತಿ ಕ್ಷೇತ್ರಗಳೇ. ಆಹಹ! ಎಂಥ ಪ್ರಶಾಂತವಾದ ಸ್ಥಳ! ಸುಂದರವಾದ ದೇವಸ್ಥಾನಗಳು! ಮುದ್ದಾದ ವಿಗ್ರಹಗಳು! ನೋಡ್ತಾ ಇದ್ರೆ - ಮಾತೂ ಹೊರಡಲ್ಲ - ಅಲ್ಲಿಂದ ಕಾಲೂ ಹೊರಡಲ್ಲಮ್ಮ. ಈ ದೇವರುಗಳು ಕೇಳಿದ್ದು ಕೊಡ್ತಾರಂತೆ. ಎಲ್ಲ ವಿಘ್ನಗಳನ್ನೂ ನಿವಾರಿಸ್ತಾರಂತೆ. ಎಷ್ಟೇ ಆಗ್ಲಿ ವಿಘ್ನರಾಜ-ವಿಘ್ನ ನಿವಾರಕ ಅಲ್ವೆ.'

ಆಂ! ಅಂದ್ಹಾಗೆ ವಿಘ್ನ ಅಂದಿದಕ್ಕೆ ಜ್ಞಾಪಕಕ್ಕೆ ಬಂತು. ವಾಷಿಂಗ್ ಮಿಷಿನ್ನು - ಮಿಕ್ಸಿ ರಿಪೇರಾಯ್ತ? ಮೆಕ್ಯಾನಿಕ್ ಬಂದಿದ್ನಾ? ಇಲ್ದಿದ್ರೆ ಫೋನ್ ಮಾಡು. ಅವು ಬಂದಾಗ್ನಿಂದ ಏನೋ ಒಂದು ವಿಘ್ನ. ಅದು ಕೆಟ್ಟಿದೆ. ಇದು ಕೆಟ್ಟಿದೆ ಇದೇ ಆಯ್ತು. ಒಂದು ಚಟ್ನಿ ಮಾಡ್ಲಿಲ್ಲ - ಒಂದು ನೆಟ್ ಬನೀನು ವಾಷ್ ಮಾಡ್ಲಿಲ್ಲ.

ಅಲ್ಲಿಂದ ಕೊಲ್ಲೂರಿಗೆ ಹೋದ್ವಿ. ಸಾಕ್ಷಾತ್ ಶಂಕರಾಚಾರ್ರು ಪ್ರತಿಷ್ಠಾಪನೆ ಮಾಡಿದ ದೇವತೆ - ಮೂಕಾಂಬಿಕೆ. ಆದ್ರೆ ತಾಯಿ ದರ್ಶನವಾಗ್ಲಿಲ್ಲಮ್ಮ - ಬಾಗಿಲು ಮುಚ್ಬಿಟ್ಟಿತ್ತು. ಇನ್ನು ಸಾಯಂಕಾಲದ ವರೆಗೆ ಕಾದ್ರೆ ಸನ್ ಸೆಟ್ಟಿಂಗ್ ತಪ್ಹೋಗುತ್ತೇಂತ ಆಗುಂಬೆಗೆ ಹೊರಟ್ವಿ.

ಆಗುಂಬೆ ಘಾಟ್ಸ್ - ಅಬ್ಬ! ಅದೇನು ಗಿಡಮರಗಳು! ಅದೆಷ್ಟು ವಿಧ! ಅದೆಷ್ಟು ಬಣ್ಣ! ಅದ್ಭುತ! ಅದೇನು ದೈವ ಸೃಷ್ಟಿ! ಸಾಕ್ಷಾತ್ ದೇವ್ರೇ ಪ್ರತ್ಯಕ್ಷವಾಗ್ತಾನಮ್ಮ. ಅಂಕು ಡೊಂಕಾಗಿ ಸುತ್ಕೊಂಡ್ ಬಳಸ್ಕೊಂಡ್ ಹೋಗೋ ಆ ದಾರಿ? ಸಾಕ್ಷಾತ್ ಆದಿಶೇಷ. ಯಾವ್ದೋ ಹೊಸ ಲೋಕದಲ್ಲಿರ್ತೀವೆ.

ಆ ಮುಳುಗೋ ಸೂರ್ಯ? ಏನು ಸೊಗಸಾಗಿರ್ತಾನೆ! ಎಷ್ಟು ಶಾಂತವಾಗಿರ್ತಾನೆ! ನಮ್ಮ ಜನ್ಮದಲ್ಲೇ ನೋಡಿರೊಲ್ಲ ಅಂಥಾ ದೃಶ್ಯ. ಅದರಲ್ಲಿ ಅದೇನು ಕೆಂಪು! ನನ್ನ ತಮ್ಮನ ಮದ್ವೇಲಿ ನನ್ನ ತೌರು ಮನೇವ್ರು ಕೊಟ್ಟಿಲ್ವಾ ಧರ್ಮಾವರದ ಸೀರೆ? ಸ್ವಲ್ಪ ಹೆಚ್ಚು ಕಮ್ಮಿ ಆ ಕಲರ್ರು. ಆದ್ರು ಆ ಕೆಂಪು ಕಲರ್ರು ಕೊಡೋಕೆ ಯಾವ್ನೋನ್ಗಾಗುತ್ತಮ್ಮಾ. ಚೆನ್ನಾಗಿ ಹಗ್ಗಾಗಿರೊ ಹತ್ತು ಕೆ.ಜಿ. ಟೊಮೇಟೊ ಹಣ್ಣು ರಾಶಿ ಹಾಕಿದ್ಹಾಗಿರುತ್ತೆ.

ಆಂ! ಅಂದ್ಹಾಗೆ ಟೊಮೇಟೋ ಅಂದಿದ್ದಕ್ಕೆ ಜ್ಞಾಪಕಕ್ಕೆ ಬಂತು. ಅಡಿಗೆ ಮನೇಲಿ ಬುಟ್ಟೀಲಿ ಟೊಮೇಟೊ ಹಾಗೇ ಇದೆ. ಅದನ್ನ ತೆಗೆದು ಫ್ರಿಜ್‌ನಲ್ಲಿಡು - ಇಲ್ದಿದ್ರೆ ಕೆಟ್ಹೋಗುತ್ತೆ.

ಅಲ್ಲಿಂದ ನಾವು ಶೃಂಗೇರಿಗೆ ಹೋಗೋಷ್ಟೊತ್ತಿಗೆ ರಾತ್ರಿ ಏಳೂವರೆ ಗಂಟೆ ಆಗಿತ್ತು. ಸ್ವಲ್ಪ ಸುಧಾರಿಸ್ಕೊಂಡು. ಒಂದು ದೋಸು ಕಾಫಿ ಹಾಕ್ಕೊಂಡು ದೇವಸ್ಥಾನಕ್ಕೆ ಹೋದ್ವಿ. ಎಂಥ ಪವಿತ್ರವಾದ ಸ್ಥಳ! ಸಾಕ್ಷಾತ್ ಆದಿಶಂಕರರು ಓಡಾಡಿದ ಭೂಮಿ. ಆ ಭೂಮಿ - ಗಾಳಿ - ಎರಡು ಸಾಕು ರೋಮಾಂಚನವಾಗುತ್ತೆ. ಎಲ್ಲಿಲ್ಲದ ಸಂತೋಷ ನೆಮ್ಮದಿ ಸಿಕ್ಕುತ್ತೆ. ಹುಟ್ಟಿದ್ದಕ್ಕೆ ಸಾರ್ಥಕವಾಯ್ತು ಅನ್ನುತ್ತೆ. ಅದ್ರಲ್ಲು ಶಾರದಾಮ್ನೋರ್ನ ನೋಡ್ಬೇಕು. ಏನು ನಗುಮುಖ! ಏನು ಕಳೆ! ಏನು ಸೌಂದರ್ಯವಮ್ಮ ಆ ಶಾರದೆಗೆ! ಎಂಥ ಅಲಂಕಾರ! ಮೈತುಂಬ ಒಡವೆಗಳು. ವಜ್ರದ ಮೂಗುತಿ ಸೊಗಸಾದ ಗಿಳಿ ಹಸಿರಿನ ರೇಷ್ಮೆ ಸೀರೆ.

ಆಂ! ಅಂದ್ಹಾಗೆ ರೇಷ್ಮೆ ಸೀರೆ ಅಂದಿದ್ದಕ್ಕೆ ಜ್ಞಾಪಕಕ್ಕೆ ಬಂತು. ಮೊನ್ನೆ ಮದುವೆ ಮನೇಗೆ ಉಟ್ಕೊಂಡು ಹೋಗಿದ್ನಲ್ಲಾ ರೇಷ್ಮೆ ಸೀರೆ - ಕೇಸರಿ ಕಲರ್‌ದು - ಅದು ಮಂಚದ ಮೇಲೆ ಹಾಗೇ ಇದ್ಯೇನೋ - ಸ್ವಲ್ಪ ನೋಡಿ ಬೀರುನಲ್ಲಿಡಮ್ಮ - ಜಿರಳೆ ಗಿರಳೆ ಕಡಿದುಬಿಟ್ಟಾತು.

ಕೊನೇದು ಹೊರನಾಡು. ನಿಜವಾಗ್ಲೂ ಶಾಂತ-ಶೃಂಗೇರೀಲೂ ಅಷ್ಟೇ - ಇಲ್ಲೂ ಅಷ್ಟೆ. ನಾವು ಭೂಲೋಕದಲ್ಲೇ ಇರೊಲ್ಲ ಎಲ್ಲೋ ಇರ್ತೀವೆ. ಸೊಗಸಾದ ತೋಟ - ತೆಂಗು - ಅಡಿಕೆ - ಮಾವು - ಬೇವು ಸೊಂಪಾಗಿ ಬೆಳೆದು ಮುಗಿಲು ಮುಟ್ಟುತ್ವೆ. ಎದುರಿಗೆ ಎತ್ತರವಾದ ಸ್ಥಳದಲ್ಲಿ ದೇವಸ್ಥಾನ ಎತ್ತರವಾದ ಗರ್ಭಗುಡಿ ಅದರಲ್ಲಿ ಆಳೆತ್ತರ ಅನ್ನಪೂರ್ಣೆ ನಿಂತಿದ್ದಾಳೆ ಏನು ಅಲಂಕಾರ! ಏನು ಆಭರಣಗಳು! ತಾಯಿ ಬಂದು ಎದುರಿಗೆ ನಿಂತ್ಹಾಗೇ ಇರುತ್ತಮ್ಮ. ಅಲ್ಲ ನಮಗೇ ಹೀಗೆ ಕಂಡರೆ 'ನಿತ್ಯಾನಂದಕರಿ - ವರಾಭಯಕರಿ - ಸೌಂದರ್ಯ ರತ್ನಾಕರಿ' ಅಂದ್ರಲ್ಲಾ ಆದಿ ಶಂಕರರು ಅವರಿಗೆ ಹೇಗೆ ಕಂಡಿರಬೇಕು! ಪ್ರತಿನಿತ್ಯ ಏನು ಭಕ್ತರು! ಏನು ಸಂತರ್ಪಣೆ! ಅನ್ನದ ರಾಶಿ ಬಿದ್ದಿರುತ್ತೆ.

ಆಂ! ಅಂದ್ಹಾಗೆ ಅನ್ನ ಅಂದಿದ್ದಕ್ಕೆ ಜ್ಞಾಪಕಕ್ಕೆ ಬಂತು. ಅನ್ನ ಮಟ್ಟಸವಾಗಿ ಮಾಡ್ತಿದ್ದೀಯ ತಾನೇ? ಓೀಗ್ಹೇಳ್ತೀನೀಂತ ಏನೂ ತಿಳ್ಕೋಬೇಡ. ಹಾಳು ಕೆಟ್ಟಕಾಲ ಇಪ್ಪತ್ತು ರೂಪಾಯಿ ಕೊಟ್ರು ಒಳ್ಳೇ ಅಕ್ಕಿ ಸಿಕ್ಕೊಲ್ಲ.

ಏನೋಮ್ಮ. ಇಂಥಾ ಸ್ಥಳಗಳನ್ನು ನೋಡ್ತಾ ಇದ್ರೆ ಮನೆ-ಮಠ-ಸಂಸಾರ ಎಲ್ಲಾ ಮರೆತೋಗುತ್ತೆ. ಯಾವ್ದೂ ಶಾಶ್ವತವಲ್ಲ - ಏನು ಬೇಡ ಅನ್ನಿಸ್ಬಿಡುತ್ತೆ. ನಾವು ನಾಲ್ಕೈದು ದಿನಗಳಿಂದ ಎಲ್ಲಾ ಮರೆತು ಆ ಭಗವಂತನ ಧ್ಯಾನದಲ್ಲೇ ಹಾಯಾಗಿದ್ದಿ. ಈ ಲೋಕವೇ ಮರೆತು ಹೋಗಿತ್ತು. ಅದಕ್ಕೆ ಕಾಗದ ಬರೆಯೋದು ಮರೆತು ಹೋಗಿತ್ತು. ಅದ್ಹಾಗಿರ್ಲಿ ತಿಂಡಿ ತೀರ್ಥ ಊಟ ಕೂಡಾ ಬೇಡಾ ಅನ್ನಿಸ್ಬಿಟ್ಟಿತ್ತು.

ನಾವು ನಾಳೆ ಇಲ್ಲಿಂದ ಬೇಲೂರಿಗೆ ಹೋಗಿ ಅಲ್ಲಿ ಪದ್ದಿ ಮಗನ ಉಪನಯನ ಮುಗಿಸಿಕೊಂಡು ಗುರುವಾರ ಬೆಂಗ್ಳೂರಿಗೆ ಬರ್ತೀವಿ. ರಾತ್ರಿ ಎಷ್ಟೊತ್ತಾಗುತ್ತೋ! ಏನೋ! ಲೈಟಾಗಿ ಸ್ವಲ್ಪ ಅನ್ನ-ಸಾರು ಒಂದು ಚಟ್ನೀನೋ-ಗೊಜ್ಜೋ ಮಾಡಿಟ್ಟಿರು. ಹೇಗೂ ಉಪ್ಪಿನಕಾಯಿ ಚೆಟ್ನಿಪುಡಿ ತುಪ್ಪ ಮೊಸರು ಇದ್ದೇ ಇರುತ್ತೆ ಸಾಕು. ಇಷ್ಟಕ್ಕು ಶರೀರದ ತುಂಬ ಮನಸ್ಸಿನ ತುಂಬ ಆ ಭಗವಂತ-ಅವನ ಧ್ಯಾನವೇ ತುಂಬಿಕೊಂಡಿರೋವಾಗ ತಿಂಡಿ ತೀರ್ಥ ಯಾರಿಗೆ ಬೇಕಾಗಿದ್ಯಮ್ಮಾ, ಬರ್ಲಾ? ಇಂತೀ ಆಶೀರ್ವಾದಗಳು.

ನಿನ್ನ ಅತ್ತೆ

ವೇದಾಂತಮ್ಮ



ತಗೊಳ್ಳಪ್ಪಾ ಕೇಳಿದ್ದೆಯಲ್ಲ. ಮೀಟರ್ ಮೇಲೆ 10 ರೂಪಾಯಿ!

ಹೊಗಳಿಕೆಯ ಹಮ್ಮೀರರು!

– ನೀರಗುಂದ ಕೇಶವಮೂರ್ತಿರಾವ್

ಹೊಗಳಿಕೆಗೆ ಹಿಗ್ಗಬಾರದಂತೆ. ತೆಗಳಿಕೆಗೆ ಕುಗ್ಗಬಾರದಂತೆ. ಆದರೆ ಹೊಗಳಿಕೆ ಬಾಯ್ಬಿಡದವರು ಯಾರು? ಕಾಗೆ-ನರಿ ಕತೆ ಎಲ್ಲರಿಗೂ ಗೊತ್ತಲ್ಲ! ಇಂದ್ರ ಚಂದ್ರ ದೇವೇಂದ್ರನೆಂದು ಹೊಗಳುವ ಹಮ್ಮೀರರಿಗೇನೂ ಕೊರತೆಯಿಲ್ಲ. ಹೊಗಳುವಿಕೆ ಇಂದು ನೆನ್ನೆಯದಲ್ಲ. ನಮ್ಮ ಪುರಾಣ ಇತಿಹಾಸಗಳಲ್ಲಲ್ಲದೇ ಇವತ್ತಿನ ನಿತ್ಯ ಜೀವನದಲ್ಲಿಯೂ ಹೊಗಳಿಕೆಯ ಸ್ಥಾನ ಕಡಮೆಯಾಗಿಲ್ಲ!

ಬಸವಣ್ಣನವರ ''ಹೊನ್ನ ಶೂಲದಲಿಕ್ಕಿರೆನ್ನ ಹೊಗಳಿ ಹೊಗಳಿ'' ಎಂಬ ಮಾತು ನೆನಪಿಗೆ ಬರುತ್ತದೆ. ಕೆಲವು ಸಾರೆ ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳಬೇಕಾಗುತ್ತದೆ. ನಮ್ಮನ್ನು ನಾವೇ ಹೊಗಳಿಕೊಂಡುಬಿಟ್ಟರೆ ಬೇರೆಯವರ ಹೊಗಳಿಕೆ ನಮಗೇನೂ ಮಾಡಲಾರದೇನೊ? ಹೊಗಳುಭಟ್ಟರ ಹೊಗಳಿಕೆಗಳನ್ನು ಕೇಳಿದಾಗ ನಿಜವಾಗಲೂ ನಾನು ಇದಕ್ಕೆ ಅರ್ಹನೇ ಎಂದು ಅನ್ನಿಸುವಷ್ಟು ಚೆನ್ನಾಗಿ ಹೊಗಳುತ್ತಾರೆ.

ಹಿಂದೆ ರಾಜ ಮಹಾರಾಜರ ಕಾಲದಲ್ಲಿ ಹೊಗಳುಭಟ್ಟರು ವಂಧಿಮಾಘದರು ರಾಜರ ಬಿರುದು ಬಾವಲಿಗಳನ್ನು ರಾಜಸಭೆಗೆ ಪರಿಚಯ ಮಾಡಿಸುತ್ತಿದ್ದರು.

ಮನುಷ್ಯನ ಮುಖ್ಯ ದೌರ್ಬಲ್ಯವೆಂದರೆ ಹೊಗಳಿಕೆಗೆ ಮರುಳಾಗುವುದು. ಮನುಷ್ಯನೇನು ನಮ್ಮ ದೇವರು ದೇವತೆಗಳು ಸಹ ಇದಕ್ಕೆ ಬಲಿಯಾಗುತ್ತಾರೆ. ದಿನ ನಿತ್ಯವು ನಡೆಯುವ ಸಹಸ್ರ ನಾಮಾರ್ಚನೆ, ಯಜ್ಞ ಯಾಗಾದಿಗಳೆಲ್ಲವೂ ಹೊಗಳಿಕೆಯ ಇನ್ನೊಂದು ರೂಪವಷ್ಟೆ! ಇದರ ಮೂಲಕ ತಮ್ಮ ಇಷ್ಟಾರ್ಥ ಸಿದ್ಧಿಗಳೆಲ್ಲ ನೆರವೇರುವಂತೆ ಪ್ರಾರ್ಥಿಸುತ್ತಾರೆ. (ಹೊಗಳುತ್ತಾರೆ!)

ನಮ್ಮ ಕಾವ್ಯಗಳಲ್ಲಿ ರಾಜಾಶ್ರಯ ಪಡೆದ ಕವಿಗಳು ತಮ್ಮ ದೊರೆಗಳನ್ನು ಹಾಡಿ ಹೊಗಳಿರುವುದನ್ನು ಕಾಣಬಹುದು!

ಹೊಗಳಿಕೆಯ ಶಕ್ತಿಯನ್ನು ಅರಿಯಬೇಕಾದರೆ ಕಾಳಿದಾಸನ ಮೇಘದೂತದಲ್ಲಿ ನೋಡಬೇಕು. ಪ್ರೇಮ ಸಂದೇಶವನ್ನು ತನ್ನ ಪ್ರಿಯತಮೆಗೆ ತಲುಪಿಸಬೇಕೆಂಬ ಪ್ರಿಯಕರನ ಮೊರೆಯನ್ನು ಮೇಘಗಳು ಕೇಳುವುದಿಲ್ಲ. ಆಗ ಪ್ರಿಯಕರನು ಮೇಘಗಳನ್ನು ಹೊಗಳಲು ಪ್ರಾರಂಭಿಸುತ್ತಾನೆ! ಮೇಘಗಳು ಗುಡುಗು ಮಿಂಚಿನ ಸಹಿತ ಪ್ರಿಯಕರನ ಸಂದೇಶವನ್ನು ಹೊತ್ತೊಯ್ಯುತ್ತವೆ.

ಇಂದಿನ ದೂರದರ್ಶನ, ಪತ್ರಿಕೆ ಮುಂತಾದ ಮಾಧ್ಯಮಗಳಲ್ಲಿಯೂ ಸಹ 'ಉಧೊ' 'ಉಧೊ' ಎಂದು ತಮಗೆ ಬೇಕಾದವರನ್ನು ಹೊಗಳುವುದರಲ್ಲಿ ಹಿಂದೆ ಬೀಳುವುದಿಲ್ಲ.

ಹೊಗಳುವವರನ್ನು ಕಂಡಾಗ 'ಎಲಾ ಇವನ' ಎಂದು ಎನ್ನಿಸದಿರದು! ಆದರೆ ಎಲ್ಲರನ್ನೂ ಹೊಗಳುವವನು ಯಾರನ್ನೂ ಹೊಗಳುವುದಿಲ್ಲ ಎಂದು ನಿಮಗೆ ಕೊಂಚ ಸಮಯದ ನಂತರ ಅರಿವಾಗುತ್ತದೆ! ಎಲ್ಲರಿಗೂ ಒಂದೇ ತರಹ! ''ಓಹೋ, ಅವ್ರು ಬಿಡಪ್ಪ ಸಾಮಾನ್ಯರಲ್ಲ...'' ಎಂದು ನಿಮ್ಮೆದುರಿಗೆ ನಿಮಗಾಗದವರನ್ನು ಹೊಗಳಿ, ಅವರೆದುರು ಹೋದಾಗ ''ನಿಮ್ಗೆ ಗೊತ್ತಿಲ್ಲಾ ಸಾರ್, ಏನನ್ಕಂಡಿದಿರಾ ಅವ್ನು. ಮನಸ್ಮಾಡಿದ್ರೆ ನಿಮ್ಮನ್ನು...'' ಎಂದು ಹೊಗಳಿ ಅಟ್ಟಕ್ಕೇರಿಸಿರುತ್ತಾರೆ! ಆದರೆ ಇದು ಕ್ಷಣಮಾತ್ರ! ಮೂರನೆಯವರೆದುರಿನಲ್ಲಿ ನಿಮ್ಮಿಬ್ಬರನ್ನೂ ಅಟ್ಟದಿಂದ ಭಾರಿ ಪ್ರಪಾತಕ್ಕೆ ತಳ್ಳಿರುತ್ತಾನೆ ಈ ಹೊಗಳಿಕೆಯ ಹಮ್ಮೀರ!

ಸಾಹಿತ್ಯ ಕ್ಷೇತ್ರದಲ್ಲಂತೂ ಹೊಗಳುವ ತೆಗಳುವ ಕಾಯಕವನ್ನು ಸಭೆ, ಸಮಾರಂಭವಲ್ಲದೆ ಪತ್ರಿಕೆಗಳಲ್ಲಿ ಪ್ರತಿ ನಿತ್ಯವು ಕಾಣಬಹುದು. ಕೃತಿಗಿಂತ ಕೃತಿಕಾರನನ್ನೇ ಗುರಿಯಾಗಿಟ್ಟುಕೊಂಡು ಹೊಗಳುವವರನ್ನು ದರ್ಶಿಸಬಹುದು! ಕೆಲವು ಮರಿ ಲೇಖಕರು ತಮ್ಮ ಪುಸ್ತಕಗಳಿಗೆ ಹಿರಿಯರೊಬ್ಬರ ಮುನ್ನುಡಿಯನ್ನೋ ಬೆನ್ನುಡಿನ್ನೋ ಆಶಿಸುವುದು ಸಹಜ. ಆದರೆ ನಮ್ಮ ಕವಿ ದುಂಡಿರಾಜರು ತಮ್ಮ ಹನಿಗವನವೊಂದರಲ್ಲಿ ಹೀಗೆ 'ಎಚ್ಚರಿಕೆ' ಕೊಡುತ್ತಾರೆ-

ಮುಖದ ಚಲುವನ್ನು
ಊಹಿಸಬೇಡಿ
ತರುಣಿಯ ಬೆನ್ನುನೋಡಿ
ಕಳಪೆ ಕೃತಿಗಳಿಗೂ
ಇರುತ್ತವೆ ಸ್ವಾಮಿ
ಭರ್ಜರಿ ಬೆನ್ನುಡಿ!

ಮರಿ ಲೇಖಕರು ಸಹ ತಮ್ಮ ಬೆನ್ನು ತಟ್ಟಲು ಬಯಸಿರುತ್ತಾರೆ! ಇದನ್ನೆ ವಿಲಿಯಂ ಸಾಮರ್ಸೆಟ್‌ಮಾಂರವರು ''ಜನರು ನಿನ್ನನ್ನು ವಿಮರ್ಶೆಗಾಗಿ ಕೋರುವವರಾದರೂ ಅವರಿಗೆ ಬೇಕಿರುವುದೆಲ್ಲಾ ಹೊಗಳಿಕೆ'' (people ask you for criticism, but they only want praise) ಎನ್ನುತ್ತಾರೆ.


ಅಪರೂಪಕ್ಕೆ ನಮ್ಮನ್ನು ಯಾರಾದರೂ ಹೊಗಳಿದಾಗ ಅದರ ವಿರುದ್ಧದ ಅರ್ಥವೇ ಅಡಗಿರುತ್ತದೆ! ''ನಿಮಗಿನ್ನೂ ಪ್ರಾಯವಿರುವುದೆಂದು ಯಾರಾದರೂ ನಿಮ್ಮನ್ನು ಹೊಗಳಿದರೆ ನಿಮಗೆ ಮುಪ್ಪಡರುತ್ತಿದೆ ಎಂದರ್ಥ'' (Whenever a man's friends begin to compliment him about looking young he may be sure that they think he is growing old) ಎಂದು ವಾಷಿಂಗ್ಟನ್ ಇರ್ವಿಂಗ್ ಅಭಿಪ್ರಾಯ ಪಡುತ್ತಾನೆ.

ಹೀಗೆ ಹೊಗಳಿಕೆಯ ಹಮ್ಮೀರರ ಕುರಿತು ಹೇಳ ಹೊರಟರೆ ಅದಕ್ಕೆ ಕೊನೆ ಮೊದಲಿಲ್ಲ. ಆದರೂ ನಮ್ಮ ಕನ್ನಡದ ತಿಂಮ ಬ್ರಹ್ಮ ಬೀchi ಯವರ 'ಅಂಬೋಣ' ಹೀಗಿದೆ-

ಹೊಗಳಿಕೆಗೆ ಮರುಳಾಗು ಅದುವೆ ನಿನ್ನಯ ಸಾವು।
ಹೊಗಳುವವನು ಗತಿಗೇಡಿ ನೀನು ಮತಿಗೇಡಿ॥
ಕಾಗೆಯಂದದಿ ಬಹರು ಹೊಗಳಭಟ್ಟಂಗಿಗಳು।
ಬಗಳುವ ನಾಯಿ ಬಹು ಮೇಲೊ ತಿಂಮ॥

ಆದ್ದರಿಂದ ಈ ಹೊಗಳಿಕೆಯ ಹಮ್ಮೀರರಿಂದ ದೂರವಿರುವುದೇ ಒಳಿತು. ಇವರ ವಿಚಾರವಾಗಿ ಹುಷಾರಾಗಿರಬೇಕು. ಯಾವಾಗಲೂ ಖಾಲಿ ಚಮಚದಿಂದಲೇ ಊಟ ಮಾಡಿಸುತ್ತಾರಂತೆ!

ಡಿವಿಜಿಯವರಂದರಂತೆ ''ವನಸುಮದೊಳೆನ್ನ ಜೀವನವು..... ಘನನು ತಾನೆಂದೆಂಬ ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ಬಿಡದೆ'' ಇದ್ದರೆ ಜನುಮ ಸಾರ್ಥಕ!



ಚುನಾವಣೆಯ ನಂತರ

- ರಾಮಿ

ಗೆದ್ದೆತ್ತಿನ ಬಾಲ ಹಿಡಿದವರೆ, ಸೋತ ಸಲಗಗಳೆ ಚುನಾವಣೆಯ ಕಂತೆಗಳ ಬಿಚ್ಚಲು ಬೇಡಿ! ಹಾಲಾಹಲ ಹರಿದೀತು ಅದರಿಂದ. ಹೊಲಸೆಲ್ಲ ಚಿಮ್ಮೀತು ಅದರಿಂದ. ಆ ಕಂತೆಗಳ ಬಿಚ್ಚಿದಿರೊ, ಒಂದನಾಡಹೋಗಿ ಒಂಭತ್ತನಾಡಿ ನಗೆಪಾಟಲಿಗೀಡಾಗುವುದು ತಪ್ಪದು ಎಂದೆಚ್ಚರಿಸುವ ನಮ್ಮ ಕೊರವೇಶ್ವರ

★★★

ಗೆದ್ದೆ ಗೆಲುವಿರೆಂದು ಪೂಸಿ ಮಾಡಿ ಉಬ್ಬಿಸಿ ಎನ್ನನು ಸೋಲಿನ ಮಹಾ ಶೂಲದಲಿಕ್ಕಿದಿರಯ್ಯ! ನಿಮ್ಮ ಉಬ್ಬಿಸಾಟಗಳೆ ಎನಗೆ ಕೈಕೊಟ್ಟವಯ್ಯ ನಿಮ್ಮ ಎಗರಾಟ ಹುಚ್ಚಾಟಗಳು ಎನ್ನ ಇಡುಗಂಟನೇ ಹೊಡೆದುಕೊಂಡು ಹೋದವಯ್ಯ ಅಯ್ಯೋ ಕೆಟ್ಟೆನು ಸೈರಿಸಲಾರೆನು ಎಂದು ಹಲುಬುವವರ ಕಂಡ ನಮ್ಮ ಕೊರವೇಶ್ವರ.

★★★

ನಾನರ್ಪಿಸುವ ವಡೆಸರವನೊಪ್ಪಿಸಿಕೊಳ್ಳಯ್ಯ ಆಂಜನೇಯ ಸ್ವಾಮಿ! ನೀನೊಳ್ಳಿತನಾದರೆ ಎಂತಾದರೂ ಮಾಡಿ ಏನಾದರೂ ಮಾಡಿ ಚುನಾವಣೆಯೊಳು ಗುಳಿಗುಳಿಯಾದ ಸಂಪತ್ತೆಲ್ಲವನು ತುಂಬಿಕೊಡಯ್ಯ ಎಂದು ಅಂಗಲಾಚುವವನ ಕಂಡ ನಮ್ಮ ಕೊರವೇಶ್ವರ.

★★★

ನಡೆಯೊಂದು ಪರಿ ನುಡಿಯಲೊಂದು ಪರಿ ಮನದೊಳಗೆ ಇನ್ನೊಂದೇ ಪರಿ. ಚಾರಿತ್ರ್ಯ ಶುದ್ಧವಿಲ್ಲ ಎಂದೆಲ್ಲ ಹಳಿಯದಿರಿ ಹುಲು ಮಾನವರ ಎಲೆಕ್ಷನ್ ಕಾಲೇಜಲ್ಲಿ ಡಿಗ್ರಿ ಗಿಟ್ಟಿಸಲು ದಾರಿ ಬೇರಿಲ್ಲವಯ್ಯ ಎಂದು ಗೆದ್ದೆತ್ತು ಸಂಭ್ರಮಿಸುವುದ ಕಂಡ ನಮ್ಮ ಕೊರವೇಶ್ವರ.

★★★

ನಾನೊಂದು ಬಗೆದರೆ ದೈವ ತಾನೊಂದು ಬಗೆವುದು. ನಾನು ಕೇವಲ ಅಸೆಂಬ್ಲಿ ಸೀಟಿಗೆಳಸಿದರೆ ದೈವ ಸಚಿವ ಸಂಪುಟದಲ್ಲಿ ಸೀಟೊದಗಿಸಿತಯ್ಯ! ಎಮ್ಮೆಲೆಯಾಗಿ ಪೇಟೆಯಲಿ ಒಳ್ಳೆ ಬಾಡಿಗೆ ಮನೆಯ ಹಿಡಿಯುವೆನೆಂದಿದ್ದರೆ ದೈವ ರಾಜಧಾನಿಯಲಿ ಬಿಟ್ಟಿ ಮನೆ ಒದಗಿಸಿತಯ್ಯ! ಹಳೇ ಕಾರೊಂದ ಕೊಂಡು ಊರ ಬೀದಿಯಲಿ ವಿಜಯೋತ್ಸವ ಹುಡಿ ಹಾರಿಸುವನೆಂದಿದ್ದರೆ ಸೆಳೆ ಮಿಂಚಿನಂತೆ ಸುಯ್ಯೆಂದು ಧಾವಿಸುವ ಹೊಸಕಾರು ಸಾರಥಿ ಸಮೇತ ಬಂದಿದೆಯಯ್ಯ! ದೇವದ ಪರಿಗೆ ಏನೆಂಬಿರಯ್ಯ ಎಂದು ಹಿರಿ ಹಿರಿ ಹಿಗ್ಗಿದ್ದೆಲ್ಲ ಕನಸಿನಲ್ಲಿ ಎಂದು ತಲೆ ಚಚ್ಚಿಕೊಂಡವನ ಕಂಡ ನಮ್ಮ ಕೊರವೇಶ್ವರ.

(ಅಕ್ಕ ಅಣ್ಣನವರ ಕ್ಷಮೆ ಬೇಡಿ)

ನಿಮ್ಮ ಪತ್ರಗಳು

ಸಂಪಾದಕರು, ಅಪರಂಜಿ ಇವರಿಗೆ,

ಕಳೆದೆರಡು ತಿಂಗಳಿನಿಂದ, ಅಪರಂಜಿ ಪತ್ರಿಕೆಯಲ್ಲಿ ''ನಾನು ಗಮಾರ'' 'ನೀನಲ್ಲ ನಾನು ಗಮಾರ'' ಎಂದು ಕಿತ್ತಾಡುತ್ತಿರುವ, ಶ್ರೀಯುತರುಗಳಾದ ಎ.ಎಸ್. ರಾಮಕೃಷ್ಣ ಹಾಗೂ ಎಸ್. ರಾಮಮೂರ್ತಿಯವರನ್ನು ಕಂಡು ಆಶ್ಚರ್ಯವಾಗುತ್ತಿದೆ.

ಯಾಕೆ ಸ್ವಾಮಿ? ಕೋಟಿ ಕೋಟಿ ಜನರಿರುವ ಈ ಕನ್ನಡ ನಾಡಿನಲ್ಲಿ ನೀವಿಬ್ಬರೇ ಗಮಾರರೆಂಬ ಈ ಭ್ರಮೆ ಯಾಕೆ?

ಒಂದು ಕಾಲದ ರೈಲು ಪ್ರಯಾಣವನ್ನನುಭವಿಸಿದವರಿಗೆಲ್ಲ, ಬಿ.ಎಚ್. ಕುಲಕರ್ಣಿಯವರು ರೈಲು ಬಿಡುತ್ತಿಲ್ಲವೆಂದು ಖಂಡಿತ ತಿಳಿದಿದೆ.

ಜನಾರ್ಧನ ಸ್ವಾಮಿಯವರ ''ಬ್ರಾಂಚ್ ಮ್ಯಾನೇಜರ್'' ಒಂದು ಸರಳ ಸುಂದರ ಚಿತ್ರ. ಅಪರಂಜಿಯ ನ್ಯೂ ಫೌಂಡ್ ಜನಾರ್ಧನರ ಸಂತತಿ ನೂರಾಗಲಿ ಎಂದು ಹರಸುವೆನೆಂದರೆ; ಎಲ್ಲಿ ನಮ್ಮ ಜನಾರ್ಧನ ಪೂಜಾರಿಗಳು ನೂರಾಗಿಬಿಡುತ್ತಾರೋ ಎಂದು ಹೆದರಿಕೆ.

ಒಟ್ನಲ್ಲಿ, ಇಪ್ಪತ್ತು ವರುಷಗಳ ಸತತ ಅಭ್ಯಾಸದಿಂದ ಅಪರಂಜಿ ಚೆನ್ನಾಗಿ ಕುಣಿಯಲು ಕಲಿತಿದ್ದಾಳೆ ದೇವರು ಇವಳಿಗೆ ಚಿರ ಯೌವನವನ್ನು ಕರುಣಿಸಿ, ನಮ್ಮಂತಹವರ ಹೊಟ್ಟೆಯುರಿಸುತ್ತಿರಲಿ.

– ಶ್ರೀನಿವಾಸ ವೈದ್ಯ (ಶೀನೂ)

ಮಾನ್ಯರೆ,

ಕಳೆದ ಜೂನ್-2004 ತಿಂಗಳ 'ಅಪರಂಜಿ' ನನ್ನ ಲೇಖನದಲ್ಲಿ ಅವಜ್ಞತೆಯಿಂದೊಂದು ಪ್ರಮಾದ ಉಂಟಾಗಿದೆ. ಅದಕ್ಕಾಗಿ ನಿಮ್ಮ ಹಾಗೂ ನಿಮ್ಮ ಓದುಗರ ಕ್ಷಮೆ ಬೇಡುತ್ತೇನೆ. ದಯವಿಟ್ಟು ಮುಂದಿನ ಸಂಚಿಕೆಯಲ್ಲಿ ನೀವು ನನ್ನ ಈ ತಪ್ಪನ್ನು ತಿದ್ದುವ ಪ್ರಕಟಣೆ ನೀಡಬೇಕಾಗಿ ಪ್ರಾರ್ಥನೆ.

ಕಾಳಿದಾಸನ ಬಗ್ಗೆ ಲೋಕಪ್ರಸಿದ್ಧ 'ಸುಭಾಷಿತ'
ಪುರಾಕವೀನಾಂ ಗಣನಾ ಪ್ರಸಂಗೇ
ಕನಿಷ್ಠಿಕಾऽಧಿಷ್ಠಿತ ಕಾಲಿದಾಸಾ।
ಅದ್ಯಾಪಿ ತತ್ತುಲ್ಯಕವೇರ ಭಾವಾ
ದನಾಮಿಕಾ ಸಾರ್ಥವತೀ ಬಭೂವ॥

ದಲ್ಲಿನ ಮಾತುಗಳನ್ನು ಉಲ್ಲೇಖಿಸುವಾಗ '.... ಕನಿಷ್ಠಿಕಾऽ ಧಿಷ್ಠಿತ ಕಾಲಿದಾಸ' ಎನ್ನುವುದರ ಬದಲು ಮಹಾಕವಿಯನ್ನೂ, ರಾ.ಶಿ. ಅವರನ್ನೂ, 'ಅನಾಮಿಕ' ಎಂದು ಕರೆದು ಅಪಚಾರವೆಸಗಿದ್ದೇನೆ. ಕ್ಷಮಿಸಬೇಕು.

ಹೀಗೆ, ನಿಮ್ಮ

– ಎಚ್.ಕೆ. ರಾಮಚಂದ್ರಮೂರ್ತಿ

ಕ್ರಿಕೆಟ್ಟು - ನೀತಿ ಸಂಹಿತೆ!

- ಎಚ್. ಗೋಪಾಲಕೃಷ್ಣ

ಕ್ರಿಕೆಟ್ಟನಲ್ಲಿ ಫೈನು ಹಾಕೋದೂ, ದಂಡ ವಿಧಿಸೋದೂ ತೀರಾ ಈಚೆಗೆ ಬಂದಿರೋ ಶಿಸ್ತು ಕ್ರಮಗಳು. ತುಂಬಾ ಹಿಂದೆ ಅಂದರೆ ಈ ಒನ್‌ಡೇ ಮ್ಯಾಚುಗಳ ಕಲ್ಪನೆಗಳೇ ಇನ್ನೂ ಮುಟ್ಟಿರದಿದ್ದ ಕಾಲದಲ್ಲಿ ನಾವು ಆ ಕಾಲದ ಕ್ರಿಕೆಟ್-ಥಿಂಗರಿಂಗರು ಒಂದು ಕೋಡ್ ಆಫ್ ಕಾಂಡಕ್ಟನ್ನು ರೂಪಿಸಿ ನಡೆಸಿಕೊಂಡು ಬಂದಿದ್ದೆವು. ಈಗ ಆ ವಿಷಯಕ್ಕೆ ತಮ್ಮ ಸವಾರಿ ಬರಲಿ.

ಲೆದರ್ ಬಾಲು, ಸ್ಟಫ್ಡ್ ಪ್ಯಾಡು, ತಲೆಗೆ ಹೆಲ್ಮೆಟ್ಟು, ಕೈಕಾಲುಗಳಿಗೆ ಗಾರ್ಡು ಇವೆಲ್ಲ ಇಲ್ಲದೇ ನಾವು ಕ್ರಿಕೆಟ್ಟನ್ನ ಮನೆ ಪಕ್ಕದ ಖಾಲಿ ಸೈಟಿನಲ್ಲಿ ಆರಂಭ ಮಾಡಿದವರು. ಈ ಪರಿಕರಗಳನ್ನ ಕೊಳ್ಳೋಕ್ಕೆ ನಮ್ಮ ಹತ್ತಿರ ಇವಾಗಿನ ಥರಹವೇ ಆಗಲೂ ಕಾಸು ಇರಲಿಲ್ಲ! ಅದರಿಂದ ಕ್ರಿಕೆಟ್ಟಿನ ಪೋಸ್ಟ್ ಆಟವನ್ನು ಆಡಿ ಕ್ರಿಕೆಟ್ಟು ಆಡಿದ ತೃಪ್ತಿ ಪಡೀತಾ ಇದ್ದೆವು.

ಅಂದ ಹಾಗೆ ನಮ್ಮ ಟೀಮಿನಲ್ಲಿ ಹನ್ನೊಂದು ಜನ ಆಡಬೇಕು ಅಂಬೋ ನಿಯಮ ಏನು ಇರಲಿಲ್ಲ. ಜನ ಅಂದರೆ ಪ್ಲಯರ್ಸು ಹೆಚ್ಚಿದ್ದರೆ ಒಂದೊಂದು ಟೀಮಿನಲ್ಲಿ ಇಪ್ಪತ್ತು ಜನ ಆಡೋದೂ ಇತ್ತು ಮತ್ತು ಜನ ಅದೇ ಪ್ಲಯರ್ಸು ಕಡಿಮೆ ಇದ್ದಾಗ ಆರೇ ಜನ ಸಹ ಕ್ರಿಕೆಟ್ಟು ಆಡುತ್ತಿದ್ದೆವು! ಅಂದರೆ ಕ್ರಿಕೆಟ್ ಫಾರ್ ಕ್ರಿಕೆಟ್ ಸೇಕ್ ಎಂಬೋ ತತ್ವವನ್ನು ಆ ಕಾಲದಲ್ಲೇ ರೂಢಿಸಿಕೊಂಡಿದ್ದವರು ನಾವು.

ಹೀಗೇ ಒಮ್ಮೆ ಒಂದು ಮ್ಯಾಚು ಹಾಕಿದೆವು. ಮತ್ತೆ ಆ ಕಾಲಕ್ಕೆ ಹೋದರೆ ಈಗಿನ ಹಾಗೆ ಸಾವಿರ ಸಾವಿರ ಡಾಲರುಗಳ ಅಥವಾ ಚಿನ್ನದ ಟ್ರೋಫಿಗಳ ಮ್ಯಾಚುಗಳು ನಮಗೆ ತಿಳೀದು. ಆರಾಣೆ - ಅಂದರೆ ಈಗಿನ ಮೂವತ್ತೇಳು ಪೈಸೆಗಳು - ಬೆಲೆಯ ಒಂದು ಮೆಡಲ್ಲು ಅಥವಾ ಎರಡು ಆಣೆಯ ಒಂದು ಪೆನ್ಸಿಲ್ಲು ನಮ್ಮ ಬಹುಮಾನದ ಮೊತ್ತ. ಆದರೆ ಆ ಆರಾಣೆಯ ಮೆಡಲ್ಲೇ ಆಗಲೀ ಅಥವಾ ಎರಡಾಣೆಯ ಪೆನ್ಸಿಲ್ಲೇ ಆಗಲೀ ಗೆದ್ದಾಗ ಅದೆಂಥಹ ಖುಷಿ ಆಗುತ್ತಿತ್ತು ಅಂತೀರೀ? ಆ ಪ್ರೈಜು ಗೆಲ್ಲಲು ಅದೇನು ಪೈಪೋಟೀ ಮಾಡ್ತಾ ಇದ್ದೆವು ಅಂತೀರೀ....

ಹೀಗೇ ಒಮ್ಮೆ ಶ್ರೀ ರಾಂಪುರ ಇಲೆವೆನ್ ಮೇಲೆ ನಮ್ಮ ಆರ್ ನಗರ್ ಇಲೆವೆನ್ ಅವರು ಒಂದು ಮ್ಯಾಚು ಹಾಕಿದೆವು. ಅವರು ಮ್ಯಾಚು ಅವರು ಆಟ ಆಡುವ ಶ್ರೀರಾಂಪುರದ ಇಸ್ಕೂಲ್ ಮೈದಾನದಲ್ಲಿ ಆಗಲಿ ಅಂತ. ನಾವು ಇಲ್ಲ ಬ್ಯಾಟು ಬಾಲು ನಾವೇ ಕೊಡ್ತಿರೋದರಿಂದ ಮ್ಯಾಚು ನಮ್ಮ ರಾಜಾಜಿನಗರದ ಮೈದಾನದಲ್ಲೇ ಆಗಬೇಕು ಅಂತ. ಬ್ಯಾಟು ಬಾಲು ನೀವು ಕೊಟ್ಟರೇನು ನಾವು ನಿಮಗೆ ಕೋಡುಬಳೆ ಕೊಡ್ತಾ ಇದೀವಲ್ಲಾ ಅಂತ ಆ ಟೀಮಿನವರು! ನಮ್ಮ ಟೀಮಿನವರಿಗೋ ಕೋಡುಬಳೆ ಮೇಲಿನ ಆಸೆ ಬಿಡೋಹಾಗಿಲ್ಲ ಜತೆಗೆ ಅವರ ಮೈದಾನದಲ್ಲಿ ಆಡುವ ಮನಸೂ ಇಲ್ಲ! ಕೊನೆಗೆ ಒಂದು ಒಪ್ಪಂದಕ್ಕೆ ಬಂದೆವು. ಒಪ್ಪಂದದ ರೀತ್ಯಾ ಈ ಬಾರಿ ಅವರ ಮೈದಾನದಲ್ಲೇ

ಆಡುವುದು ಮುಂದಿನ ನಾಲ್ಕು ಮ್ಯಾಚುಗಳನ್ನು ಅವರು ನಮ್ಮ ಮೈದಾನದಲ್ಲಿ ಆಡಬೇಕು ಮತ್ತು ಮುಂದಿನ ಮ್ಯಾಚುಗಳಲ್ಲಿ ಕೋಡುಬಳೆ ಸಂಗಡ ತೇಂಗೊಳಲನ್ನೂ ತರಬೇಕು! ನಮ್ಮ ಎದುರು ಟೀಮಿನ ಕ್ಯಾಪ್ಟನ್ನಿನ ಅಜ್ಜಿ ಇವೆರೆಡೂ ತಿಂಡಿಗಳನ್ನ ತುಂಬಾ ಚೆನ್ನಾಗಿ ಮಾಡುತ್ತಾರೆ ಅಂತ ಅನುಭವದಿಂದ ತಿಳಿದಿದ್ದೆವು. ಸರಿ ಅಂತ ಮ್ಯಾಚಿನ ದಿನ ಫಿಕ್ಸ್ ಮಾಡಿದೆವು. ಹತ್ತೂವರೆ ಸುಮಾರಿಗೆ ಅವರ ಮೈದಾನ ಸೇರಿದೆವು.

ನಮ್ಮ ಅದೃಷ್ಟಕ್ಕೆ ಅವತ್ತು ನಮ್ಮ ಕಡೆ ಐದು ಪ್ಲಯರ್ಸು ಚಕ್ಕರು! ಅವರ ಕಡೆ ಎಂಟು ಜನ ಬಂದಿದ್ದಾರೆ. ಕೊನೆಯವನಿಗೆ ಸಿಂಗಲ್ ಬ್ಯಾಟಿಂಗನ್ನ ನಮ್ಮ ಕಡೆ ಮಾತ್ರಾ ಕೊಡಬೇಕು ಅಂತ ಒಡಂಬಡಿಕೆ ಆಯಿತು. ಅವರ ಕಡೆ ಅವರ ಫಾಸ್ಟ್ ಬೋಲರು ಚಕ್ಕರು ಹೊಡೆದಿರೋದರಿಂದ ನಮ್ಮ ಕಡೆ ಫಾಸ್ಟ್ ಬೋಲಿಂಗ್ ಇರಬಾರದು ಇದ್ರು ಆತ ಬೋಲಿಂಗನ್ನ ಮಾಡಬಾರದು ಅಂದರು. ಸರಿ ಆಗಲಿ ಅಂತ ತಲೆ ಆಡಿಸಿದೆವು. ಜೊತೆಗೆ ನಮ್ಮಲ್ಲಿನ ಪಿಂಡ ಬೋಲಿಂಗ್ ಸ್ಪೆಷಲಿಸ್ಟು ಪಿಂಡದ ಬೋಲಿಂಗ ಎಸೆಯೊ ತರಹ ಇಲ್ಲ ಅಂತ ಮತ್ತೊಂದು ಡಿಮಾಂಡು ಮುಂದಿಟ್ಟರು. ಪಿಂಡ ಬೋಲಿಂಗು ಅಂದರೆ ಈಗಿನ ನಿಮಗೆ ತಿಳಿದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಪಿಂಡ ಬೋಲಿಂಗಿನ ಬಗ್ಗೆ ವಿವರ ಕೊಟ್ಟು ಬಿಡ್ತೀನಿ. ಮಾಮೂಲು ಬೋಲಿಂಗಿನಲ್ಲಿ ಬೋಲರು ಬಾಲು ಎಸೆದ ಕೂಡಲೇ ಏನಾಗುತ್ತೆ ಅಂದರೆ ಬಾಲು ಇವನ ಕೈಯಿಂದ ಮುಂದಕ್ಕೆ ಹಾರುತ್ತೆ ಮತ್ತು ಒಂದು ಪುಟ ಬಿದ್ದ ಕೂಡಲೇ ಮತ್ತೆ ಪುಟ ಎಗರಿ ಚಿಮ್ಮುತ್ತೆ ಮತ್ತು ಅದರ ಗತಿ ನೋಡಿಕೊಂಡು ಬ್ಯಾಟು ಬೀಸಿದರೆ - ಬೀಸಿದರೆ - ಬ್ಯಾಟಿಗೆ ಬಾಲು ಸರಿಯಾದ ಜಾಗಕ್ಕೆ ಬಡಿದರೆ ಅದು ಬೌಂಡರಿಯನ್ನೋ ಸಿಕ್ಸರನ್ನೋ ತರಬಹುದು ಅಥವಾ ನೇರ ಕ್ಯಾಚೋ ರನ್ನೋ ಆಗಿ ಕನ್ವರ್ಟ್ ಆಗಬಹುದು. ಪಿಂಡ ಅಂದರೆ ಏನಾಗುತ್ತಪ್ಪಾ ಅಂದರೆ ಬಾಲು ಬೋಲರಿನ ಕೈಯಿಂದ ಜಾರಿ ಮುಂದೆ ನುಗ್ಗುತ್ತೆ ನೋಡಿ, ಮುಂದೆ ನುಗ್ಗುತ್ತಾ, ಪುಟ ಬಿತ್ತಾ ಮತ್ತೆ ಪುಟ ಏಳಬೇಕು ತಾನೇ? ಅದು ಪುಟ ಏಳೋದಿಲ್ಲ! ಹಾಗೇ ನೆಲದ ಮಟ್ಟಕ್ಕೇ ನುಸುಳಿಕೊಂಡು ಬ್ಯಾಟಿನಿಂದಲು ಬ್ಯಾಟ್ಸುಮನ್ನಿನಿಂದಲೂ ತಪ್ಪಿಸಿಕೊಂಡು ವಿಕೆಟ್ಟಿನ ಕಡೆ ನುಗ್ಗಿ ವಿಕೆಟ್ಟನ್ನ ಬೀಳಿಸಿಬಿಡುತ್ತೆ. ವಿಕೆಟ್ಟು ಬಿದ್ದರೆ ಆಟಗಾರ ಔಟ್ ಆಗ್ತಾನೆ! ಬಾಲು ಎಲ್ಲಿ ಹೋಯಿತು ಅಂತ ಅವನಿಗೆ ತಿಳಿಯೋದಕ್ಕೆ ಮೊದಲೇ ಅವನು ಔಟಾಗಿ ವಾಪಸ್ಸು ಬರಬೇಕಾಗುತ್ತೆ. ಇಡೀ ಮಹಾಭಾರತ ಗೆಲ್ಲೋಕ್ಕೆ ಕೃಷ್ಣ ಒಬ್ಬ ಇದ್ದರೆ ಸಾಕು ಅಂತ ಆ ಕಾಲದಲ್ಲಿ ಅರ್ಜುನ ನಂಬಿದ್ದ ನೋಡಿ ಅದೇ ರೀತಿಯಲ್ಲಿ ನಮ್ಮ ಮ್ಯಾಚುಗಳನ್ನ ಗೆಲ್ಲೋದಿಕ್ಕೆ ಇಡೀ ಟೀಮಿನಲ್ಲಿ ಒಬ್ಬನೇ ಒಬ್ಬ ಪಿಂಡ ಉರುಳಿಸೋ ತಜ್ಞ ಇದ್ದರೆ ಸಾಕು ಅಂತ ನಾವು ನಂಬಿದ್ದೆವು.

ಆದರೂ ಎದುರು ಟೀಮಿನವರ ಕಂಡೀಷನ್ನು ಒಪ್ಪಿದೆವು-ಕೋಡುಬಳೆ, ತೇಂಗೋಳಲು ಆಸೆಯಿತ್ತಲ್ಲಾ!

ಮ್ಯಾಚು ಷುರು ಆಯಿತು. ಟಾಸ್ ಹಾಕಿದೆವು. ಅದರದ್ದೇ ಮೊದಲ ಫೀಲ್ಡಿಂಗು. ನಮ್ಮವರು ನೂರಾ ಹದಿನೈದು ರನ್ನು ಹೊಡೆದರೂ ಇನ್ನೂ ಯಾರು ಔಟಿಲ್ಲ-ಆಟ ನಿಲ್ಲಿಸಿಬಿಡ್ತೀವಿ ಅಂತ ಅವರು ಕತೆ ತೆಗೆದರು. ಪ್ಯಾಡು ಕಟ್ಟಿಕೊಂಡು ಕೈಯಲ್ಲಿ ಬ್ಯಾಟು ಹಿಡಿದು ನಿಂತಿದ್ದ ನನಗೆ ಅಳುವೇ ಬಂದುಬಿಟ್ಟಿತು. ಬ್ಯಾಟಿಂಗ್ ಮಾಡಬೇಕು ಅಂತ

ಅದೆಷ್ಟೋ ದಿನದಿಂದ ಕನಸು ಕಂಡಿದ್ವಿ. ಹೋಗಲಿ ಅಂತ ಅಷ್ಟೇ ಸ್ಕೋರಿಗೆ ಡಿಕ್ಲೇರ್ ಮಾಡಿಕೊಂಡೆವು. ಅವರ ಬ್ಯಾಟಿಂಗು ಶುರು ಮಾಡಿದರು. ರನ್ ಔಟಾದರೆ ರನ್ ಔಟಿಲ್ಲ, ಎಲ್.ಬಿ. ಆದರೆ ಎಲ್ಬಿ. ಇಲ್ಲ, ಬೋಲ್ಡ್ ಆದರೆ ಅದೆಷ್ಟೋ ಹೊತ್ತಿನ ನಂತರ ಅದು ನೋಬಾಲು ಅಂತ ಅವರ ಕಡೆ ಅಂಪೈರು ಡಿಕ್ಲೇರು ಮಾಡುತ್ತಿದ್ದ. ಅವರು ಅರವತ್ತು ಹೊಡೆದರು, ಹೆಂಗಪ್ಪಾ ಔಟ್ ಮಾಡೋದು ಅಂತ ನಮಗೆ ಚಿಂತೆ ಶುರು ಆಗಿತ್ತು. ಪಿಂಡದ ಸ್ಪೆಷಲಿಸ್ಟು ನಮ್ಮ ಹತ್ತಿರವೇ ಇದ್ದರೂ ಪಿಂಡ ಉರುಳಿಸೋ ಹಂಗಿಲ್ಲ.

ಎರಡು ನಿಮಿಷ ನಮ್ಮ ಟೀಮಿನವರು ಹಾಗೇ ಥಿಂಕ್ ಮಾಡಿದೆವು. ಯಾವ ರೂಲೂ ವಯಲೇಟು ಮಾಡೋದು ಬೇಡ ನಾವು ಸ್ಪೋರ್ಟ್ಸ್‌ಮನ್ನುಗಳು ಅಂತ ನಮ್ಮ ಮನಸ್ಸಿಗೆ ತಗೊಂಡೆವು. ಕೇತಮಾರಹಳ್ಳಿ ಇಂದ ಒಬ್ಬ ಶಿವಮಂಜ ಅಂತ ಒಬ್ಬ ದಢಿಯ ನಮ್ಮ ಟೀಮಿನಲ್ಲಿದ್ದ. ಗುರಿ ಮಡಗಿ ಎಸೆಯೋ ಅಂದರೆ ಸಾಕು ಎಂಥಾ ಗುರಿ ಇಡ್ತಿದ್ದ ಅಂದರೆ ನೂರು ಗಜ ದೂರದಿಂದ ಗೋಲಿ ಹೊಡೀತಿದ್ದ. ಬಾರ್ಲಾ ಶಿವಮಂಜ ಅಂತ ಅವನನ್ನ ಕರೆದವು. ಬಾಲನ್ನ ಅವನ ಕೈಗೆ ಕೊಟ್ಟು ನೋಡ್ಲಾ ಇಂಗೆ ಬೋಲು ಮಾಡೋದು ಅಂತ ಹೇಳಿಕೊಟ್ವಿವು. ಸರಿಯಾಗಿ ಎದುರು ಪಾರ್ಟಿಯವನ ಬುರುಡೇಗೆ ಗುರಿಯಿಟ್ಟು ಬಾಲು ಎಸಿ ಅಂತ ಹೇಳಿ ಫೀಲ್ಡಿಂಗ್‌ಗೆ ಅಂತ ನಿಂತೆವು!

ಮೊದಲನೇ ಬಾಲು ಎದುರು ಪಾರ್ಟಿಯವನ ಬುರುಡೆ ಸವರಿಕೊಂಡು ಹೋಯಿತು. ಅವನು ಹೆದರಿ ಓಡಿದ. ಎರಡನೇ ಬಾಲು ಮೂರನೆಯವರ ಬುರುಡೆಗೆ ಬಿತ್ತು... ಮುಂದೆ ಕಥೆ ಹೇಳೋದೇ ಬೇಡ. ಒಂದೇ ಓವರಿನಲ್ಲಿ ಅವರು ಸೋಲು ಒಪ್ಪಿಕೊಂಡು ಬಿಟ್ಟರು! ಇದು ನನ್ನ ಜೀವನದಲ್ಲಿ ನಾನು ಮರೆಯಲಾಗದ ಒಂದು ಕ್ರಿಕಟ್ಟು ಮ್ಯಾಚು...ಅಂತ ನಮ್ಮ ಚಿಕ್ಕಪ್ಪ ಅವನ ಕಾಲದ ಮ್ಯಾಚಿನ ನಾಸ್ಟಾಲ್ಜಿಯಾವನ್ನ ನಮ್ಮೆದುರು ಹರಡಿದ್ದು, ನಮ್ಮ ಆಟಗಾರನೊಬ್ಬನಿಗೆ ಮೊನ್ನೆ ಫೈನು ಹಾಕಿದರು ನೋಡಿ ಆ ಮ್ಯಾಚನ್ನ ಟೀವೀಲಿ ನೋಡುತ್ತಾ....!

★★★

ಅವರಿಗೆ 'ತೆಲುಗು ದೇಶಂ' ಬೇಡ ಅಂದ್ರೆ,
ನಮಗೆ 'ತೆಲಗಿ ದೋಷ' ಯಾಕೆ ಬೇಕೋ?

– ಎಸ್ಸಾರ್‌ಮೂರ್ತಿ

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36. 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR